

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 82 | Tuesday 03-12-2024 | E-mail : maruti.b.hosamani76@gmail.com | Page: 4 | Price : Rs. 1/-


# ಡಾ. ಎಸ್. ಕೆ. ಮಂಜುನಾಥರಿಗೆ "ಸಂಗಮ ಸಿರಿ" ರಾಜ್ಯ ಪ್ರಶಸ್ತಿ



**ಸಿಹಿ ಕಹಿ ಸುದ್ದಿ,**
**ಹುಬ್ಬಳ್ಳಿ :** ನಾಡಿನ ಹಿರಿಯ ಸಾಹಿತಿ ಡಾ, ಸಂಗಮೇಶ ಹಂಡಿಗಿ ಅವರ ನೆನಪಿನಲ್ಲಿರುವ ಡಾ, ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ ದಿಂದ ನೀಡುವ "ಸಂಗಮ ಸಿರಿ" ರಾಜ್ಯ ಪ್ರಶಸ್ತಿಯು ಈ ಬಾರಿ ಕಾವ್ಯ ಕ್ಷೇತ್ರದಲ್ಲಿನ ಸಾಧಕರಿಗೆ ನೀಡಲಾಗುತ್ತಿದ್ದು, ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಶಿವರ ಗ್ರಾಮದ ಡಾ, ಎಸ್. ಕೆ ಮಂಜುನಾಥ ಅವರಿಗೆ ಸಂದಿದೆ.
'ಗಾಳಿಯ ಎದೆ ಸೀಳಿ ಹೊರಟ ಹಕ್ಕಿ' ಎಂಬ ಕೃತಿಗೆ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿಯು 10 ಸಾವಿರ ರೂ. ನಗದು ಹಾಗೂ ಫಲಕವನ್ನು ಒಳ ಗೊಂಡಿದ್ದು ಡಿ. 8 ರಂದು ಹುಬ್ಬಳ್ಳಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಜಿ.ಬಿ ಗೌಡಪ್ಪಗೊಳ, ಗೌರವಾಧ್ಯಕ್ಷ ಗಣಪತಿ ಗಂಗೊಳ್ಳಿ ತಿಳಿಸಿದ್ದಾರೆ. ಕವಿ ಮಹಾಂತಪ್ಪ ನಂದೂರ ಅವರ ನೇತೃತ್ವದ ಸಾಹಿತ್ಯ ಸಮಿತಿ ಈ ಆಯ್ಕೆಯನ್ನು ಮಾಡಿದೆ ಎಂದು ಕಾರ್ಯಕ್ರಮ ಸಂಯೋಜಕ ಡಾ, ಪ್ರಭು ಗಂಜಿಹಾಳ ತಿಳಿಸಿದ್ದಾರೆ. ಈ ಹಿಂದೆ ಸಂಗಮ ಸಿರಿ ಪ್ರಶಸ್ತಿಯು ವಚನ ಸಾಹಿತ್ಯ ಕ್ಷೇತ್ರದಲ್ಲಿ ಡಾ, ವೀರಣ್ಣ ದಂಡೆ ದಂಪತಿ ಹಾಗೂ ಸಿದ್ದನಗೌಡ ಬಿಜ್ಜೂರ ಅವರಿಗೆ ನೀಡಲಾಗಿತ್ತು.

**– ಡಾ. ಪ್ರಭು ಗಂಜಿಹಾಳ, ಮೊ:9448775346**

# ನನ್ನ ತಂದೆಯ ಆಶಯಗಳು ಜನ ಸೇವೆ ಮಾಡುವ ಕನಸುಗಳ ಈಡೇರಿಸುವ ಜವಾಬ್ದಾರಿ ನನ್ನದು ಅವರಿಗೆ ಅವರ ವಿಚಾರಗಳಿಗೆ ಸಾವು ಇಲ್ಲ: ಶಾಸಕ ಡಾ. ಶ್ರೀನಿವಾಸ್.ಎನ್.ಟಿ





**ಸಿಹಿ ಕಹಿ ಸುದ್ದಿ,**
**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಭಾನುವಾರ ರಂದು ಆಯೋಜಿಸಲಾಗಿದ್ದ. ಮಾಜಿ ಶಾಸಕರಾದ ದಿಟ ಎನ್.ಟಿ ಬೊಮ್ಮಣ್ಣನವರ ಸ್ಮರಣಾರ್ಥವಾಗಿ ಅಕ್ಷರ ಐ ಫೌಂಡೇಶನ್ ತುಮಕೂರು ಮತ್ತು ನೇತ್ರಲಕ್ಷ್ಮಿ ವೈದ್ಯಾಲಯ ಹೊಸಪೇಟೆ. ತಾಲೂಕು ಆರೋಗ್ಯ ಇಲಾಖೆ ಸಹಯೋಗ ದೊಂದಿಗೆ ಹಾಗೂ ಡಾ. ಶ್ರೀನಿವಾಸ್.ಎನ್.ಟಿ ಅಭಿಮಾನಿ ಬಳಗದ ಸಂಯುಕ್ತ ಆಶ್ರಯದಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ಶಿಬಿರವನ್ನು ಸಾರ್ವಜನಿಕರಿಗಾಗಿ ಇದರ ಸದುಪಯೋಗವನ್ನು ಪಡೆದು ಕೊಳ್ಳಲು ಹಮ್ಮಿಕೊಳ್ಳಲಾಗಿತ್ತು.
ಈ ಶಿಬಿರದಲ್ಲಿ ತಾಲೂಕಿನ ಹಲವಾರು ಜನರು ಭಾಗವಸಿದ್ದು ಶಾಸಕರು ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಾ, ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ನನ್ನ ತಂದೆಯವರಾದ ದಿವಂಗತ ಎನ್.ಟಿ ಬೊಮ್ಮಣ್ಣನವರು ಅಂದಿನ ತಮ್ಮ ಅಧಿಕಾರ ಅವಧಿಯಲ್ಲಿ ಜಾರಿಗೆ ತಂದ ಜನಪರ ಆಡಳಿತ ಮತ್ತು ಪ್ರಗತಿಪರ ಸುಧಾರಣೆಗಳನ್ನು ನೆನಪಿಸಿ ಕೊಳ್ಳಬೇಕು. ಅವರು ಶಿಕ್ಷಣ, ಆರೋಗ್ಯ ಮತ್ತು ಬಡವರಿಗೆ ನಿರ್ಗತಿಕರಿಗೆ ಆಶ್ರಯಕ್ಕೆ ನಿವೇಶನ ಹಾಗೂ ವಸತಿಗಳನ್ನು ನಿರ್ಮಿಸಿ ಕೊಟ್ಟಂತಹದ್ದು, ಸ್ವಚ್ಚತೆಗೆ ಆದ್ಯತೆ ಕೊಡುವ ಜೊತೆಗೆ ಸರ್ವ ರೀತಿಯಲ್ಲಿ ಸರ್ವರ ಅಭಿವೃದ್ಧಿಗೆ ಒತ್ತು ಕೊಟ್ಟಿದ್ದರು. ದಲಿತ, ಆದಿವಾಸಿ, ಹಿಂದುಳಿದ ಮತ್ತು ಎಲ್ಲಾ ವರ್ಗದ ಬಡವರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಪ್ರತಿ ಹಳ್ಳಿಗೆ ಮಣ್ಣಿನ ರಸ್ತೆಗಳು, ಏತಾ ನೀರಾವರಿ ಪದ್ಧತಿ, ಜನತಾ ಕಾಲೋನಿಗಳು, ಕೆರೆ, ಕಟ್ಟೆ, ಕಾಲುವೆ, ಚೆಕ್ ಡ್ಯಾಮ್, ಆಸ್ಪತ್ರೆ, ಶಾಲೆ, ಕಾಲೇಜು ಇನ್ನೂ ಮುಂತಾಗಿ ಅಭಿವೃದ್ಧಿ ಮಾಡಿದ್ದಾರೆ. ಅಂಗನವಾಡಿ ಶಾಲೆಗಳನ್ನು ಹುಟ್ಟು ಹಾಕಿ ಸಾಮಾಜಿಕ ನ್ಯಾಯದ ಅಡಿಯಲ್ಲಿ ಎಲ್ಲಾ ವರ್ಗದ ಮಹಿಳೆಯರಿಗೆ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಿ ಕೊಟ್ಟಿದ್ದರು. ಅದೆಷ್ಟೋ ವರ್ಷಗಳ ಕೂಡ್ಲಿಗಿ ತಾಲೂಕಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಬಡವರ ಪರ ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿರುವುದನ್ನು ಮರೆಯುವಂತಿಲ್ಲ ಎಂದು ಹೇಳಿದರು. ಕಾರ್ಮಿಕರಿಗಾಗಿ ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿಗೆ ತಂದು ಬಡವರ ಹಸಿವು ನೀಗಿಸುವ ಕೆಲಸವನ್ನು ಮಾಡಿದರು. ಹೀಗೆ ಅವರ ಕುರಿತು ದಿನ ವಿಡೀ ಎಷ್ಟೇ ಮಾತನಾಡಿದರು ಕಡಿಮೆ ಎಂದು ಹೇಳಿದರು. ಎನ್.ಟಿ. ಬಿ ಅವರಿಗೆ ಸಾವಿಲ್ಲ. ಅವರು ಈ ಮೂಲಕ ನಮ್ಮಲ್ಲಿ ಇನ್ನೂ ಜೀವಂತವಾಗಿದ್ದಾರೆ. ಹೀಗಾಗಿ ಚುನಾವಣೆ ಪೂರ್ವದಲ್ಲಿ ಕೊಟ್ಟ ಮಾತಿನಂತೆ, ಆರೋಗ್ಯಕ್ಕಾಗಿ ನಾನು ಗ್ಯಾರಂಟಿ ಎಂದೂ ಹೇಳಿದಂತೆ ಪ್ರತಿ ಜಿಲ್ಲಾ ಪಂಚಾಯತಿ ಮಟ್ಟದಲ್ಲಿ ಮುಂದಿನ ದಿನಗಳಲ್ಲಿ ಉಚಿತ ಬೃಹತ್ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳುವ ಮೂಲಕ ನನ್ನ ತಂದೆಯವರ ಹಾದಿಯಲ್ಲಿ ಮುನ್ನಡೆಯುತ್ತಾ, ನಮ್ಮ ತಂದೆಯವರನ್ನು ಇಂತಹ ಜನ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರ ಆಶಯ ಮತ್ತು ಸಿದ್ಧಾಂತಗಳನ್ನು ಮುಂದಿನ ತಲೆಮಾರಿಗೆ ರವಾನಿಸುವ ನಿಟ್ಟಿನಲ್ಲಿ ಜನರ ಸೇವೆ ಮಾಡುತ್ತೇನೆ ಎಂದೂ ಹೇಳಿದರು. ಆ ನಿಟ್ಟಿನಲ್ಲಿ ಇಂದು ನನ್ನ ಪ್ರೀತಿಯ ತಂದೆಗೆ ನಾನು ನೆಚ್ಚಿನ ಮಗನಾಗಿ ಅವರ ಕನಸು ಈಡೇರಿಸಿದ್ದೇನೆ ಎಂದರು. ಈ ಮೂಲಕ ಅವರನ್ನು ಮತ್ತೆ ಮತ್ತೇ ನೆನಪಿಸಿ ಕೊಳ್ಳೋಣ ಎಂದರು.
ಹೀಗಾಗಿ ಇನ್ನೂ ನಿಮ್ಮ ತಾಳ್ಮೆಯನ್ನು ಹೆಚ್ಚು ಪರೀಕ್ಷಿಸುವುದಿಲ್ಲ. ನಿಮಗೆ ಒಳಿತಾಗಲಿ. ನೀವು ನಮ್ಮ ವೈದ್ಯರ ಜೊತೆಗೆ ತಮ್ಮ ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿ ಕೊಂಡು ಅವರ ಸಲಹೆ ಮತ್ತು ಮಾರ್ಗ ದರ್ಶನದಲ್ಲಿ ಮುನ್ನಡೆಯಿರಿ ಎಂದೂ ಶುಭ ಹಾರೈಸಿದರು.
ಕೂಡ್ಲಿಗಿ ಹಿರೇಮಠದ ಶ್ರೀ ಪ್ರಶಾಂತ ಸಾಗರ ಸ್ವಾಮೀಜಿ, ಸಿ.ಪಿ.ಐ. ಸುರೇಶ ತಳವಾರ ಮತ್ತು ಸಿಬ್ಬಂದಿ ವರ್ಗ, ಪ.ಪಂ ಅಧ್ಯಕ್ಷರಾದ ಶ್ರೀ ಕಾವಲಿ ಶಿವಪ್ಪನಾಯಕ, ಉಪಾಧ್ಯಕ್ಷರಾದ ಲೀಲಾವತಿ ಕೆ. ಪ್ರಭಾಕರ್, ಸರ್ವ ಸದಸ್ಯರು, ಕೂಡ್ಲಿಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ.ಗುರುಸಿದ್ಧನಗೌಡ, ಕಾಂಗ್ರೆಸ್ ಮುಖಂಡರು ಹಾಗೂ ಸಮಾಜ ಸೇವಕರಾದ ಶ್ರೀಯುತ ತಮ್ಮಣ್ಣ ಎನ್. ಟಿ. ಅವರು, ತಾಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷರಾದ ಎಸ್. ವೆಂಕಟೇಶ, ಸಾರ್ವಜನಿಕ ತಾಲೂಕು ಆಡಳಿತ ಆರೋಗ್ಯ ಅಧಿಕಾರಿಗಳಾದ ಡಾ. ಎಸ್,ಪ್ರದೀಪ್ ಹಾಗೂ ಮಾಜಿ ಶಾಸಕರಾದ ದಿವಂಗತ. ಎನ್.ಟಿ ಬೊಮ್ಮಣ್ಣನವರ ಆಪ್ತರಾದ ಡಾ, ಶಾಂತಯ್ಯ, ಜೆ.ಹನುಮಂತಪ್ಪ, ವೀರಯ್ಯ, ಶ್ರೀ ಮಲ್ಲಾಪುರದ ಭರ್ಮಪ್ಪ, ಜುಮ್ಮೋಬನಹಳ್ಳಿ ಬಸವರಾಜಪ್ಪ, ಡಿ. ನಾಗರಾಜ, ಶ್ರೀಮತಿ ಚೌಡಮ್ಮ, ವಿಭೂತಿ ವೀರಣ್ಣ, ಶ್ರೀ ನರಸಿಂಹಪ್ಪ, ಟಿ. ಸಿದ್ದಪ್ಪ, ಭಾಷ ಸಾಬ್ (ಶೂಕರ್ ಅವರ ತಂದೆ), ಮಾನ್ಯ ಶಾಸಕರ ಆಪ್ತರು ಮತ್ತು ವೈದ್ಯಾರಾದ ಡಾ, ತಿಮ್ಮರಾಜು, ಡಾ, ಮಧು, ಡಾ, ರವಿಕುಮಾರ್, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಡಾ, ಟಿ.ಕೊತ್ಲಮ್ಮ ಮತ್ತು ಕಾಲೇಜಿನ ಸಿಬ್ಬಂದಿ ವರ್ಗ, ಮಾಜಿ ತಾ.ಪಂ ಸದಸ್ಯರಾದ ಶೃತಿ ವೆಂಕಟೇಶ, ಪಸಲುಪಾಲಯ್ಯ, ಮುಖಂಡರಾದ ತಮ್ಮಣ್ಣ. ಎನ್. ವಿ, ಮಂಜಣ್ಣ ಗುಂಡುಮುಣುಗು, ದೇವಯ್ಯ, ಜಿಲಾನ್, ಮಾದಿಹಳ್ಳಿ ನಜೀರ್ ಸಾಬ್, ಹಾಗೂ ಕೂಡ್ಲಿಗಿ ಕ್ಷೇತ್ರದ ಸಾರ್ವಜನಿಕರು ನೂರಾರು ಜನರು, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ. ಬಿ.ಸಾಲುಮನೆ.ವಿಜಯನಗರ**

# ಶಿಬಿರದಿಂದ ನಾಯಕತ್ವ ಸೃಷ್ಟಿ: ಡಾ. ವಸಂತ್ ಗಾಣಿಗೇರ



**ಬಾಗಲಕೋಟೆ :** ಬೌದ್ಧಿಕ ಮಟ್ಟದ ಬೆಳವಣಿಗೆ ಮತ್ತು ನಾಯಕತ್ವದ ಗುಣಗಳನ್ನು ಕಲಿಯಲು ಎನ್.ಎಸ್. ಎಸ್ ಶಿಬಿರಗಳು ವಿದ್ಯಾರ್ಥಿಗಳಿಗೆ ಅತ್ಯವಶ್ಯಕ ಎಂದು ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಸಂಯೋಜಕರಾದ ಡಾ. ವಸಂತ್ ಗಾಣಿಗೇರ ಹೇಳಿದರು.
ನಗರದ ಬಸವೇಶ್ವರ ಪದವಿ ಪೂರ್ವ ಕಲಾ ಮಹಾವಿದ್ಯಾಲಯದಿಂದ ರಾಷ್ಟೀಯ ಸೇವಾ ಯೋಜನೆ ಘಟಕದಿಂದ ಮುಚಖಂಡಿಯಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರವನ್ನು ಉಧ್ಘಾಟಿಸಿ ಅವರು ಮಾತನಾಡಿ ಎನ್.ಎಸ್.ಎಸ್ ಶಿಬಿರ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಕಲ್ಪಿಸುವ ವೇದಿಕೆ. ಶಿಬಿರಗಳಿಂದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ ಬೆಳೆಯುತ್ತವೆ . ವಿದ್ಯಾರ್ಥಿಯಾದವನು ಒಂದು ಗು–ರಿಯನ್ನು ನಿಶ್ಚಿತವಾಗಿ ಇಟ್ಟುಕೊಂಡರೆ ಮಾತ್ರ ನಾವು ಸಾಧನೆ ಮಾಡಬಲ್ಲೆವು. ನಿರ್ದಿಷ್ಟ ಗುರಿಯತ್ತ ಸಾಗಿ ಕ್ರಿಯಾಶೀಲರಾಗಿ ಎಂದರು
ಬಿವ್ಹಿವ್ಹಿ ಸಂಘದ ಸದಸ್ಯರಾದ ಪ್ರಭುಸ್ವಾಮಿ ಸರಗಣಾಚಾರಿ ಮಾತಾನಾಡಿ ಗಾಂಧೀಜಿಯವರು ಕನಸಿನ ರಾಮರಾಜ್ಯವಾಗಬೇಕಾದರೆ ಹಳ್ಳಿಗಳ ಉದ್ದಾರ ಯುವಜನತೆ ಉದ್ದೇಶವಾಗಬೇಕು ಅದು ಇಂತಹ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಿಂದ ಸಾಧ್ಯ ಎಂದರು.
ಪ್ರಾಚಾರ್ಯರಾದ ಎಸ್. ಆರ್. ಮೂಗನೂರಮಠ ಅವರು ಮಾತನಾಡಿ ಸ್ವಯಂ ಸೇವಕರು ನಿಸ್ವಾರ್ಥ ಮನೋಭಾವನೆಯಿಂದ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಉಜ್ವಲ ಭಾರತ ನಿರ್ಮಾಣ ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಸಂಚಾಲಕರಾದ ಡಾ. ಆರ್.ಎಮ್.ಬೆಣ್ಣೂರ,ಪ್ರಾಧ್ಯಾಪಕರಾದ ಆರ್. ಆರ್. ಅರಶಿಣಗೋಡಿ, ಎಸ್. ಎಮ್. ಗೌಡರ, ವಿ. ಆರ್.ಹಿರೇಮಠ, ಶ್ರೇಯಾ ಜೋರಾಪುರ ಡಾ. ಎಮ್.ಎಚ್.ವಡ್ಡರ,ಸಂತೋಷ ಸುಭಂಜಿ ಸೇ–ರಿದಂತೆ ಪ್ರಾಧ್ಯಾಪಕವರ್ಗ ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ನಮ್ಮ ಸಂವಿಧಾನವೇ ನಮ್ಮ ಶಾಸನ ಪ್ರೊ. ಮಂಜುನಾಥ ಹಳ್ಳೂರ



**ಬಾಗಲಕೋಟೆ :** ನಮ್ಮ ಸಂವಿಧಾನವೇ ನಮ್ಮ ಶಾಸನವಾಗಿದ್ದು ಅದನ್ನು ಅಳವಡಿಸಿಕೊಂಡು ನಡೆಯುವುದು ನಮ್ಮ ಕರ್ತವ್ಯವಾಗಿದೆ ಎಂದು ಉಪನ್ಯಾಸಕರಾದ ಪ್ರೊ. ಮಂಜುನಾಥ ಹಳ್ಳೂರ ಮಾತನಾಡಿದರು.
ನಗರದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಆಯ್.ಕ್ಯೂ.ಎ.ಸಿ.ಮತ್ತುಎನ್.ಎಸ್.ಎಸ್.ಘಟಕಗಳ ಸಹಯೋಗದಲ್ಲಿ ಆಯೋಜಿಸಿದ 75ನೇ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅಧಿ–ತಿಯಾಗಿ ಮಾತನಾಡಿದರು.
ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾದ ವಿ. ಎನ್. ವನಕುದರೆಮಾತನಾಡಿಜಗತ್ತಿನಅಂತ್ಯಂತಶ್ರೇಷ್ಠವಾದ ಲಿಖಿತ ಸಂವಿಧಾನವಾಗಿದ್ದುಅದರಡಿಯಲ್ಲಿಕಾರ್ಯ ನಿರ್ವಹಿಸುವುದುನಮ್ಮೆಲ್ಲರಹೆಮ್ಮೆಯಾಗಿದೆಎಂದರು. ವೇದಿಕೆಯ ಮೇಲೆ ಆಯ್.ಕ್ಯೂ.ಎ.ಸಿ. ಸಂಂ–ಯೋಜಕರಾದ ಡಾ. ಡಿ. ಎಸ್. ಲಮಾಣಿ, ರಾಷ್ಟೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮಾಧಿಕಾ–ರಿಗಳು ಎಸ್. ಕೆ. ಶಿವಾನಂದ, ಮಹಾವಿದ್ಯಾಲಯದ ಬೋಧಕಮತ್ತುಬೋಧಕೇತರಸಿಬ್ಬಂದಿಗಳುಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭಾರತದ ಸಂವಿಧಾನ ವಿಶ್ವಕ್ಕೆ ಮಾದರಿ: ಡಾ.ಜಗನ್ನಾಥ ವಿ. ಚವಾಣ



**ಬಾಗಲಕೋಟೆ :** ದೇಶದ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಿದ್ದು, ಸಂವಿಧಾನದ ಕಾಯ್ದೆ, ನಿಯಮಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಎಂದು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಗನ್ನಾಥ ವಿ. ಚವಾಣ ಹೇಳಿದರು.
ಬಸವೇಶ್ವರವಾಣಿಜ್ಯಮಹಾವಿದ್ಯಾಲಯದಲ್ಲಿ ಚುನಾವಣಾ ಸಾಕ್ಷರತಾ ಘಟಕ ಮತ್ತು ಎನ್ ಎಸ್ ಎಸ್ ಘಟಕಗಳ ಸಹಯೋಗದಲ್ಲಿ ಜರುಗಿದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರಜಾಪ್ರಭುತ್ವದ ಹಿತವನ್ನು ಪ್ರತಿಯೊಬ್ಬರು ಕಾಪಾಡಬೇಕು. ಸರ್ವ ಧರ್ಮದವರು ಒಂದೇ ಎಂಬ ಭಾವನೆ ಮೂಡಬೇಕು. ಸಾಮಾಜಿಕ ಧರ್ಮ ಹಿನ್ನೆಲೆಗಳು ಬೇರೆ ಇದ್ದರೂ ಪ್ರತಿಯೊಬ್ಬ–ರಿಗೂ ಮುಕ್ತ ಅವಕಾಶ ಸಿಗಬೇಕು ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಸಂವಿಧಾನ ರಚಿಸಲಾಗಿದೆ. ವಿಶ್ವಕ್ಕೆ ಭಾರತ ಸಂವಿಧಾನ ಮಾದರಿ ಎಂದು ಬಣ್ಣಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀಮತಿ. ಸಂಗೀತಾ ಪವಾರ ಮಾತನಾಡಿ ನಮ್ಮ ದೇಶದ ಸಂವಿಧಾನ ಪವಿತ್ರವಾಗಿದ್ದು. ಎಲ್ಲರಿಗೂ ಎಲ್ಲ ರೀತಿಯ ಹಕ್ಕುಗಳು ದೊರಕಲಿದೆ. ಸಂವಿಧಾನಕ್ಕೆ ಪ್ರತಿಯೊಬ್ಬರೂ ಗೌರವ ನೀಡಬೇಕಿದೆ. ಸಂವಿಧಾನದ ಬಗ್ಗೆ ತಿಳಿದುಕೊಳ್ಳಲು ವಿದ್ಯಾರ್ಥಿಗಳು ಅಧ್ಯಯನಶೀಲರಾಗಿ ಇದರ ಮಹತ್ವ ಅರಿಯಬೇಕಿದೆ ಎಂದರು.
ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಂ.ನಂಜುಂಡಸ್ವಾಮಿ ಮಾತನಾಡಿ ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿ ಹೇಳಿದರು.
ಆಯ್.ಕ್ಯೂ.ಎ.ಸಿ ಸಂಯೋಜಕರಾದ ಶ್ರೀಮತಿ ಗಿರಿಜಾ ಎಂ. ನಾವದಗಿ ಮಾತನಾಡಿ ಭಾರತ ಸಂವಿಧಾನದ ಪುಸ್ತಕವನ್ನು ಓದಿ ಅದರ ಜ್ಞಾನವನ್ನು ಪಡೆಯಿರಿ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಎನ್. ಎಸ್.ಎಸ್ ಘಟಕದ ಅಧಿಕಾರಿಗಳಾದ ಡಾ. ಎಂ.ಎಂ. ಹುದ್ದಾರ, ಪಿ ಎಸ, ಮಠದ, ಚುನಾವಣಾ ಸಾಕ್ಷರತಾ ಘಟಕದ ಅಧಿಕಾ–ರಿಯಾದ ಶ್ರೀ ಎಂ.ಎಚ್.ಜನ್ನಪ್ಪಗೋಳ, ಕ್ರೀಡಾ ವಿಭಾಗದ ನಿರ್ದೇಶಕರಾದ ಡಾ. ಎಸ್.ಎಸ್.ಕೋಟ್ಯಾಳ ಉಪಸ್ಥಿತರಿದ್ದರು.
ಕುಮಾರಿ ದೇವಮ್ಮ ಪೂಜಾರಿ ಪ್ರಾರ್ಥಿಸಿದರು,ಪೂಜಾ ಕೋಟಿ ಸ್ವಾಗತಿಸಿದರು, ಸುಹಾಸ ಬಡಿಗೇರ ಸಂವಿಧಾನದ ಪ್ರತಿಜ್ಞಾವಿಧಿ ಬೋಧಿಸಿದರು, ಸ್ವಾತಿ ಗೌಳಿ ವಂದಿಸಿದರು.

# ಕರ ವಸೂಲಾತಿಯಲ್ಲಿ ದಾಖಲೆ ನಿರ್ಮಾಣ। ವಿಶೇಷ ಆಂದೋಲನ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ಬಾಗಲಕೋಟೆ ಜಿ.ಪಂ



**ಬಾಗಲಕೋಟೆ :** ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ವಿಶೇಷ ಆಂದೋಲನ ಹಮ್ಮಿಕೊಳ್ಳುವ ಮೂಲಕ ಒಂದೇ ದಿನದಲ್ಲಿ 3.07 ಕೋಟಿ ರೂ.ಗಳ ಕರ ಸಂಗ್ರಹ ಮಾಡುವ ಮೂಲಕ ದಾಖಲೆ ನಿರ್ಮಿಸಿ,ವಸೂಲಾತಿಯಲ್ಲಿ ಬಾಗಲಕೋಟೆ ಜಿಲ್ಲಾ ಪಂಚಾಯತ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದುಕೊಂಡಿದೆ.
ಜಿ.ಪಂಮುಖ್ಯಕಾರ್ಯನಿರ್ವಾಹಕಅಧಿಕಾರಿ ಶಶಿಧರ ಕುರೇರ, ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯಾದ್ಯಂತ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ನವೆಂಬರ 25 ರಂದು ಬೆಳಿಗ್ಗ 7 ರಿಂದ ಸಂಜೆ 6 ಗಂಟೆವರೆಗೆ ವಿಶೇಷ ತೆರಿಗೆ ವಸೂಲಾತಿ ಆಂದೋಲ ಹಮ್ಮಿಕೊಳ್ಳಲಾಗಿತ್ತು. ಅಭಿಯಾನದಲ್ಲಿ ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪಂಚಾಯತ ಅಬಿವೃದ್ದಿ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾ.ಪಂ ಸಿಬ್ಬಂದಿಗಳು ತೆರಿಗೆ ವಸೂಲಾತಿಯಲ್ಲಿ ಪಾಲ್ಗೊಂಡು ದಾಖಲೆ ನಿರ್ಮಿಸುವಲ್ಲಿ ಕಾರಣಿಭೂತರಾಗಿದ್ದಾರೆ.
ಬೀಳಗಿ ತಾಲೂಕಿನ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ 76.82 ಲಕ್ಷ ರೂ.ಗಳಷ್ಟು ಕರ ವಸೂಲಿ ಮಾಡಿದರೆ, ಬಾಗಲಕೋಟೆ ತಾಲೂಕಾ ವ್ಯಾಪ್ತಿಯಲ್ಲಿ 52.65 ಲಕ್ಷ ರೂ, ಮುಧೋಳ ತಾಲೂಕಾ ವ್ಯಾಪ್ತಿಯಲ್ಲಿ 42.12 ಲಕ್ಷರೂ,ಬಾದಾಮಿ ತಾಲೂಕಾ ವ್ಯಾಪ್ತಿಯಲ್ಲಿ 37.23 ಲಕ್ಷ ರೂ, ರಬಕವಿ–ಬನಹಟ್ಟಿ ತಾಲೂಕಾ ವ್ಯಾಪ್ತಿಯಲ್ಲಿ 24.49 ಲಕ್ಷ ರೂ, ಹುನಗುಂದ ತಾಲೂಕಾ ವ್ಯಾಪ್ತಿಯಲ್ಲಿ 23.19 ಲಕ್ಷ ರೂ, ಇಳಕಲ್ಲ ತಾಲೂಕಾ ವ್ಯಾಪ್ತಿಯಲ್ಲಿ 18.67 ಲಕ್ಷ ರೂ, ಜಮಖಂಡಿ ತಾಲೂಕಾ ವ್ಯಾಪ್ತಿಯಲ್ಲಿ 17.18 ಲಕ್ಷ ರೂ, ಹಾಗೂ ಗುಳೇದಗುಡ್ಡ ತಾಲೂಕಾ ವ್ಯಾಪ್ತಿಯಲ್ಲಿ 15.13 ಲಕ್ಷ ರೂ.ಗಳು ಸೇರಿ ಒಟ್ಟು 3.07 ಕೋಟಿ ರೂ.ಗಳ ತೆರಿಗೆ ಸಂಗ್ರಹಿಸಿ ಬಾಗಲಕೋಟೆ ಜಿಲ್ಲಾ ಪಂಚಾಯತ ದಾಖಲೆ ನಿರ್ಮಿಸಿದೆ.
ತೆರಿಗೆ ವಸೂಲಾತಿ ಪ್ರಗತಿಯಲ್ಲಿ ಇದೇ ರೀತಿ ಮುಂದಿನ ದಿನಗಳಲ್ಲಿ ಸಹ ಶೇ.100 ರಷ್ಟು ಪ್ರಗತಿ ಸಾದಿಸಿದರು ಜಿ.ಪಂ ಸಿಇಓ ತಿಳಿಸಿದ್ದಾರೆ.
ದಾಖಲೆ ಮಟ್ಟದ ಕರ ವಸೂಲಾತಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿದವರನ್ನು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಹಾಗೂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಅಭಿನಂದನೆ ಸಲ್ಲಿಸಿದ್ದಾರೆ.

# ಇಷ್ಟಲಿಂಗ ಪೂಜೆಯಿಂದ ಪರಿಪೂರ್ಣ ಸುಖ

**ಗುಳೇದಗುಡ್ಡ :** ಸಂಸ್ಕಾರಯುತ ಜೀವನ ರೂಪಗೊಳ್ಳಲು ಪ್ರತಿಯೊಬ್ಬರೂ ಅಂಗದ ಮೇಲೆ ಲಿಂಗ ಧರಿಸಬೇಕು. ತಂದೆ, ತಾಯಿಗಳು ಮಕ್ಕಳ ಆದ-ರ್ಶ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಎದೆಯ ಮೇಲೆ ಲಿಂಗ ಧಾರಣ ಮಾಡುವ ಸಂಸ್ಕಾರ ನೀಡಬೇಕು. ಆ ಪರಿಸರ ಮನೆಯಲ್ಲಿ ರೂಪಗೊಂಡಾಗ ಮನೆ ಮಂದಿರವಾಗುತ್ತದೆ.

ಆಧ್ಯಾತ್ಮದ ನೆಲೆಗಟ್ಟಿನಲ್ಲಿ ಮನೆಯ ಗೃಹಿಣಿಯರು ಮಕ್ಕಳ ಉಜ್ವಲ ಭವಿಷ್ಯಕ್ಕೆ ಉತ್ತಮ ಸಂಸ್ಕಾರ, ಸಂಸ್ಕೃತಿ ಕಲಿಸಿ ವಿಶ್ವಬಸವಣ್ಣ ಆದಿಯಾಗಿ ಬಸವಾದಿ ಶರಣರ ಕಾಯಕ, ತತ್ವನಿಷ್ಠೆಯ ಗುಣಗಳನ್ನು ಬೆಳೆಸುವ ಕರ್ತವ್ಯ ಪಾಲಕರದ್ದು. ಒಳ್ಳೆಯ ಆತ್ಮಗಳು ಈ ಲೋಕವನ್ನು ಆಳುತ್ತಿವೆ. ಬಸವಾದಿ ಪ್ರಮತರ ಆತ್ಮಗಳು ಜನರ ಬವ ಬಂಧನವನ್ನು ನಿವಾರಣೆ ಮಾಡುತ್ತಿವೆ.

ಮನುಷ್ಯ ಜೀವನದಲ್ಲಿ ನಿತ್ಯ ನಿರಂತರ ಪ್ರಯತ್ನ ಮಾಡುತ್ತಿರಬೇಕು. ಮನುಷ್ಯ ತನು, ಮನ, ಭಾವದಿಂದ ಮನಸ್ಸನ್ನು ಏಕಿಕೃತಗೊಳಿಸಬೇಕು. ಅದರಿಂದ ಆತ್ಮ ಪರಮಾತ್ಮನೆಡೆ ನಡೆಯುತ್ತದೆ. ಈ ಲೋಕದಲ್ಲಿ ಪರಮಾತ್ಮ ಮಾತ್ರ ಪರಿಪೂರ್ಣ. ಯಾವೊಬ್ಬ ಮನುಷ್ಯನೂ ಪೂರ್ಣವಾಗಿಲ್ಲ. ಮನೆಯಲ್ಲಿ ಪಾಲಕರು ಸಿಟ್ಟು ಮಾಡಿಕೊಂಡು ಮನಸ್ಸನ್ನು ವಿಚಲಿತಗೊಳಿಸಿ ವಿಚಿತ್ರ ಭಾವನೆ ತಾಳದೇ ಮನಸ್ಸನ್ನು ಮಂದಿರವಾಗಿಸಿಕೊಂಡು ಬಸವಾದಿ ಶರಣರು ನಡೆದು ನುಡಿದು ರಚಿಸಿದ ವಚನಗಳ ಪಠಣ ಮಾಡಿ ಜೀವನ ಸಾರ್ಥಕಗೊಳಿಸಿಕೊಳ್ಳಬೇಕು. ಅದುವೇ ನಿಜವಾದ ಜೀವನ. ಜಗತ್ತಿನಲ್ಲಿ ನಾವೆಲ್ಲ ಗೆಲ್ಲಬೇಕಾದರೆ ಅಂಗದ ಮೇಲೆ ಲಿಂಗ ಇರಲೇಬೇಕು. ಲಿಂಗವೊಂದೆ ನಮಗೆ ಗಟ್ಟಿತನ ಮಾಡುತ್ತದೆ. ಕಾರಣ ಲಿಂಗ ತನು, ಮನ, ಭಾವ ಮೂರನ್ನು ಶುದ್ಧಾಂತಕರಣ ಮಾಡುವ ಶಕ್ತಿ ಇದೆ. ಅರಿವೇ ಗುರುವಾದ ಮೇಲೆ ಆಚಾರವೇ ಲಿಂಗ. ಆಚಾರವೇ ಲಿಂಗ, ಅನುಭಾವವೆ ಜಂಗಮ. ಲಿಂಗ ಮಾತ್ರ ಶುದ್ಧ ಜಗತ್ತನ್ನು ನೋಡುವ ಶಕ್ತಿ ನೀಡುವ ಪ್ರಬಲ ಅಸ್ತ್ರ.

ಲಿಂಗ ಶರೀರ, ಆತ್ಮವನ್ನು ಶುದ್ಧಗೊಳಿಸುತ್ತದೆ. ವಿಚಲಿತ ಮನಸ್ಸನ್ನು ಒಂದೆಡೆ ಸೆಳೆದು ನಿಲ್ಲಿಸುವ ಶಕ್ತಿ ಇರುವ ಲಿಂಗ ನಮ್ಮ ಭವಿಷ್ಯಕ್ಕೆ ಬುನಾದಿ ಹಾಕುತ್ತದೆ. ಲಿಂಗ ಜಾತಿಯ ಕುರುಹು ಅಲ್ಲ. ಲಿಂಗ ಒಂದು ಸಮಾಜದ ಗುರುತು ಅಲ್ಲ. ಲಿಂಗ ಅದು ದೇವರನ್ನು ತೋರಿಸುವ ವಸ್ತು. ಆತ್ಮವನ್ನು ಜಾಗೃತಗೊಳಿಸಿ ಎಲ್ಲರಲ್ಲಿ ಅತೀ ಅದ್ಭುತವಾದ ಶಕ್ತಿ ತುಂಬುತ್ತದೆ. ಇದು ಬಸವಾದಿ ಶರಣರು ಕೊಟ್ಟ ಶಿವಯೋಗದ ಇಷ್ಟಲಿಂಗ ಪೂಜೆ.

ಇಷ್ಟಲಿಂಗದ ಪೂಜೆಯಿಂದಲೇ ಮಾತ್ರ ಗಟ್ಟಿಗೊಳ್ಳುತ್ತದೆ ಮನುಷ್ಯ ಜೀವನ. ಇಷ್ಟಲಿಂಗ ಪೂಜೆಯಿಂದ ಪರಿಪೂರ್ಣ ಸುಖ ಪ್ರಾಪ್ತಿಯಾಗುತ್ತದೆ. ಬಸವಣ್ಣವರ ಇಷ್ಟಲಿಂಗ ಪೂಜೆಯ ಪರಿಕಲ್ಪನೆ ಮನುಷ್ಯ ಬದುಕನ್ನು ಉಜ್ವಲಗೊಳಿಸುವ ಶಕ್ತಿ ಹೊಂದಿದೆ. ಇಷ್ಟಲಿಂಗದ ಸಾಧನೆಯಿಂದ ಜೀವನದಲ್ಲಿ ಸುಖ, ಶಾಂತಿ ದೊರೆತು ಬದುಕನ್ನು ಭವ್ಯಗೊಳಿಸುತ್ತದೆ. ಲಿಂಗ ನಿಮ್ಮ ಬದುಕನ್ನು ಕಾಪಾಡುತ್ತದೆ. ಲಿಂಗ ಸಂದರ್ಭಕ್ಕೆ ಸುಳ್ಳು ಹೇಳಲು, ಮೋಸ ಮಾಡಲು ಬಿಡುವುದಿಲ್ಲ. ದೇಹವನ್ನು ದೇವಾಲಯ ಮಾಡುತ್ತದೆ. ಆತ್ಮವನ್ನು ಪರಮಾತ್ಮನನ್ನಾಗಿ ಮಾಡುವ ಶಕ್ತಿ ಇಷ್ಟಲಿಂಗಕ್ಕಿದೆ.

ಇಷ್ಟಲಿಂಗ ಇವತ್ತು ಒಂದು ಜಾತಿಯ ಕುರುಹು ಆಗಿದೆ. ಇದು ನಮ್ಮ ಸಮಾಜದ ದುರ್ದೈವ. ಲಿಂಗ ಅದೊಂದು ಜಾತಿಅಲ್ಲ. ಇಡೀ ಮಾನವ ಜನಾಂಗದ ಏಳಿಗೆಗಾಗಿ ಬಂದಿರುವ ಏಕಮೇವ ವಸ್ತು ಅದು ಲಿಂಗ. ಸಮಾಜವನ್ನು ಬಸವಾದಿ ಪ್ರಮತರು ಇಷ್ಟಲಿಂಗ ಪೂಜೆಯಿಂದ ಆದರ್ಶ, ಉಜ್ವಲ ಸಮಾಜ ಕಟ್ಟಿದರು. ಕ್ರೈಸ್ತ ಒಳಗೊಂಡು ಬೇರೆ ಬೇರೆ ಸಮೂದಾಯದವರು ತಮ್ಮ ಕುರುಹನ್ನು ಎದೆಯ ಮೇಲೆ ಕಟ್ಟಿಕೊಂಡರು. ಆದರೆ ದೇವರ ಅರಿವಿನ ಕುರುಹು ಆದ ಸಾಧನೆಯ ಇಷ್ಟಲಿಂಗವನ್ನು ನಮ್ಮ ಎದೆಯ ಮೇಲೆ ಕಟ್ಟಿಕೊಳ್ಳಲಿಲ್ಲ. ಸತ್ಯ ಶುದ್ದವಾದ ಕಾಯಕ ಮಾಡಿ ಇಷ್ಟಲಿಂಗ ಪೂಜೆ ಮಾಡಿದರೆ ಜೀವನ ಸಾಕಾರವಾಗುತ್ತದೆ ಎನ್ನುವ ಮಾತನ್ನು ಬಸವಾದಿ ಶರಣರು ಹೇಳಿದರು. ಅದನ್ನು ನಾವೆಲ್ಲ ನಿತ್ಯ ನಿರಂತರ ಪಾಲಿಸಬೇಕು. ಇಲ್ಲಸಲ್ಲದ ಸಾಂದಭಿಕ ಆಚರಣೆಗಳನ್ನು ಮನೆಯಲ್ಲಿ ತರಬಾರದು. ಸುಖಕರ ಜೀವನಕ್ಕೆ ನಾಂದಿ ಹಾಡುವ ಹಣೆಗೆ ವಿಭೂತಿ ಹಚ್ಚಿ, ಎದೆಯ ಮೇಲೆ ಲಿಂಗ ಧರಿಸಿ ಇಷ್ಟಲಿಂಗ ಪೂಜೆ ಮಾಡಬೇಕು.

# ಜೋಡೆತ್ತಿನ ರೈತರ ನೇತೃತ್ವದಲ್ಲಿ ಈಶ ಗ್ರಾಮೋತ್ಸವ ಯಶಸ್ವಿ

**ವಿಜಯಪುರ :** ಜಿಲ್ಲೆಯ ಮನಗೂಳಿ ಗ್ರಾಮದಲ್ಲಿ ಪ್ರಥಮ ಬಾರಿಗೆ ಈಶ ಗ್ರಾಮೋತ್ಸವವನ್ನು ಜೋಡೆತ್ತಿನ ರೈತರ ನೇತೃತ್ವದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಗ್ರಾಮೀಣ ಭಾರತದ ಚೈತನ್ಯವನ್ನು ಪುನಯೌವನಗೊಳಿಸುವುದು ಮತ್ತು ಆರೋಗ್ಯಕರ ಸ್ಪರ್ಧೆಯ ಪ್ರಜ್ಞೆಯನ್ನು ಬೆಳೆಸುವ ಗುರಿಯನ್ನು ಹೊಂದಿದ ಈಶ ಗ್ರಾಮೋತ್ಸವದ ಕುರಿತು ಹಾಗೂ ನಂದಿ ಕೃಷಿ ಪುನಶ್ಚೇತನದ ಕುರಿತು ಜನಜಾಗೃತಿ ಮೂಡಿಸಲು ಆಯೋಜಿಸಿದ 150 ಕ್ಕಿಂತ ಹೆಚ್ಚು ಜೋಡೆತ್ತಿನ ಬಂಡಿಗಳ ಭವ್ಯ ಮೆರವಣಿಗೆಯು ಗ್ರಾಮದ ಜನರ ಗಮನ ಸೆಳೆಯಿತು. ಮನಗೂಳಿ ಗ್ರಾಮದ ಹಿರಿಯರು ಹಾಗೂ ರಾಜ್ಯ ಜೆಡಿಎಸ್ ನ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಹಾಗೂ ಗ್ರಾಮದ ಎಪಿಎಂಸಿ ಮಾಜಿ ಅಧ್ಯಕ್ಷ ವಿಶ್ವನಾಥಗೌಡ ಪಾಟೀಲ ಅವರು ಮೊದಲ ಜೋಡೆತ್ತಿನ ಬಂಡಿಯ ಮೇಲೆ ಕುಳಿತು ಜನಜಾಗೃತಿ ಮೂಡಿಸಿದರು. ಮನಗೂಳಿ ಗ್ರಾಮದ ಶ್ರೀ ವೀರಭದ್ರೇಶ್ವರ ಕೋಲಾಟ ತಂಡದವರು ನೀಡಿದ ಕೋಲಾಟ ಪ್ರದರ್ಶನ ಜನರ ಗಮನ ಸೆಳೆಯಿತು.



ಈಶ ಗ್ರಾಮೋತ್ಸವದ ಅಂಗವಾಗಿ ಆಯೋಜಿಸಿದ ಕ್ಲಸ್ಟರ್ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಲಚ್ಯಾಣ ಗ್ರಾಮದ ಆಟಗಾರರು ಮೊದಲ ಬಹುಮಾನದ ಮೊತ್ತ ರೂ. 9000 ಗಳನ್ನು ಪಡೆದರು. ಹಿಟ್ನಳ್ಳಿ ಗ್ರಾಮದ ಆಟಗಾರರು ದ್ವಿತೀಯ ಬಹುಮಾನದ ಮೊತ್ತ ರೂ. 6000 ಪಡೆದರು. ಮುಳವಾಡ ಗ್ರಾಮದ ಆಟಗಾರರು ತೃತಿಯ ಬಹುಮಾನದ ಮೊತ್ತ ರೂ. 3000 ಹಾಗೂ ಹಿಟ್ನಳ್ಳಿ ಗ್ರಾಮದ ಇನ್ನೊಂದು ತಂಡ ನಾಲ್ಕನೇ ಸ್ಥಾನದ ರೂ. 2000 ಗಳನ್ನು ಪಡೆಯಿತು. ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಆಟಗಾರರು ಚಿಕ್ಕಬಳ್ಳಾಪುರದ ಸದ್ಗುರು ಸನ್ನಿಧಿಯಲ್ಲಿ ಜರಗುವ ವಿಭಾಗೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವರು ಎಂದು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಈಶ ಸ್ವಯಂ ಸೇವಕ ಮುತ್ತು ಸರಶೆಟ್ಟಿ ಹೇಳಿದರು.

ಉತ್ತಮ ಜೊಡೆತ್ತುಗಳ ಪ್ರದರ್ಶನದಲ್ಲಿ ಮನಗೂಳಿ ಗ್ರಾಮದ ಮಹಾದೇವ ಹಚಡದ ಅವರ ಜೋಡೆತ್ತುಗಳು ಪ್ರಥಮ ಸ್ಥಾನ ಪಡೆದು ರೂ. 10000 ಗಳ ನಗದು ಬಹುಮಾನ ಪಡೆದವು. ಕೆ ಕೆ ಕುಲಕರ್ಣಿ ಅವರು ದ್ವಿತೀಯ ಹಾಗೂ ಸಂಗಪ್ಪ ಕಬ್ಬಿನ ಅವರು ತೃತೀಯ ಸ್ಥಾನ ಪಡೆದು ರೂ. 5000 ಹಾಗೂ ರೂ. 3000 ದಂತೆ ಬಹುಮಾನ ಪಡೆದರು. ಐದು ಜನ ಜೋಡೆತ್ತಿನ ರೈತರಿಗೆ ಸಮಾನಾಧಕರ ಬಹುಮಾನದ ಮೊತ್ತ ತಲಾ ರೂ. 1000 ದಂತೆ ನೀಡಿ ಸತ್ಕರಿಸಲಾಯಿತು.

ಮನಗೂಳಿ ಗ್ರಾಮದ ಪ್ರಮುಖರಾದ ವಿಶ್ವನಾಥಗೌಡ ಪಾಟೀಲ ಅವರು ಈಶ ಗ್ರಾಮೋತ್ಸವದ ಕುರಿತು ಮಾತನಾಡುತ್ತಾ, ಗ್ರಾಮದ ಪ್ರತಿಯೊಬ್ಬರಲ್ಲಿ ಗ್ರಾಮೋತ್ಸವವು ಹೊಸ ಹುರುಪನ್ನು ತಂದಿದೆ, ನಮ್ಮ ಗ್ರಾಮದಲ್ಲಿ ಆಯೋಜನೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಜನತಾ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಸುಭಾಸಗೌಡ ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಪ್ರಮುಖರಾದ ಬಾಬು ಯಾದವಾಡ, ಬಿ.ಎಸ್. ಪಾಟೀಲ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಆರ್ ಕೆ ಹನಗಂಡಿ, ಪ್ರಮುಖರಾದ ರಾಜುಗೌಡ ಪಾಟೀಲ, ಪಿ.ಸಿ. ಕುಲಕರ್ಣಿ, ಯಶವಂತ ಮೋರೆ, ವೀರಣ್ಣ ತೊರವಿ ಹಾಗೂ ಇತರರು ಭಾಗವಹಿಸಿದ್ದರು.

ಈಶಾ ಫೌಂಡೇಶನ್ ಸ್ವಯಂ ಸೇವಕ ಅರವಿಂದ ಕವಲಗಿ ನಿರೂಪಿಸಿದರು, ಎ.ಆರ್. ದೊಡ್ಡಮನಿ ವಂದಿಸಿದರು. ಈಶಾ ಫೌಂಡೇಶನ್ ಸ್ವಯಂ ಸೇವಕರಾದ ಚಂದನ ರಾಣಿಕಿತ್ತೂರ, ಆಶಾ ಸರಶೆಟ್ಟಿ, ಆದಿತ್ಯ ಡುಬೆ, ಶಿವಶರಣ ಕಂಬಾರ, ಶಂಕರ ಮದರಳ್ಳಿಮಠ, ವಿನೋದ ಕನಬೂರ, ಚಂದ್ರಲೇಖ, ಅಮೃತ ಸಜ್ಜನ, ಕಾವೇರಿ ಹರನಾಳ, ಕೃಷ್ಣ, ಅನಿಲ, ನಮಿತಾ, ಶಾಂತೇಶ, ಬಸವಕಿರಣ ಹಾಗೂ ಬೆಳಗಾವಿ ಜಿಲ್ಲೆಯ ಈಶ ಸ್ವಯಂ ಸೇವಕರು ಭಾಗವಹಿಸಿದ್ದರು.

# ಕನಕ ಜಯಂತಿಗೆ ಗೈರು: ಕುರುಬ ಸಮಾಜದಿಂದ ದಿಢೀರ್ ಪ್ರತಿಭಟನೆ

**ವಿಜಯಪುರ :** ರಾಜ್ಯಾದ್ಯಂತ ಭಕ್ತ ಕನಕದಾಸರ ಜಯಂತಿಯನ್ನು ಕಡ್ಡಾಯವಾಗಿ ಆಚರಿಸಬೇಕು ಎಂಬ ಸರಕಾರದ ಆದೇಶವಿದ್ದರೂ, ಸರಕಾರದ ಆದೇಶ ಧಿಕ್ಕರಿಸಿ, ಕನಕ ಜಯಂತಿಗೆ ಗೈರು ಉಳಿದಿರುವ ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಕಾರ್ಯ ವೈಖರಿಯನ್ನು ವಿರೋಧಿಸಿ, ಕರ್ನಾಟಕ ಪ್ರದೇಶ ಯುವ ಕುರುಬರ ಸಂಘ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಫೌಂಡೇಶನ್‌ನ ಪದಾಧಿಕಾರಿಗಳು ಹಾಗೂ ಜಿಲ್ಲೆಯ ಕುರುಬ ಸಮಾಜದ ಮುಖಂಡರು ವಿವಿಯ ಆಡಳಿತ ಭವನದ ಎದುರು ಬೃಹತ್ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.



ಇದೇ ವೇಳೆ ಕನಕದಾಸ ಜಯಂತಿ ಆಚರಣೆಗೆ ಗೈರು ಉಳಿದಿರುವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಬಿ.ಕೆ. ತುಳಸಿಮಾಲಾ, ಕುಲಸಚಿವ ಶಂಕರಗೌಡ ಸೋಮನಾಳ ಹಾಗೂ ಮೌಲ್ಯ ಮಾಪನ ಕುಲಸಚಿವ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಸಮಾಜದ ಮುಖಂಡ ಮೋಹನ ದಳವಾಯಿ ಮಾತನಾಡಿ, ಭಕ್ತ ಕನಕದಾಸರ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸಬೇಕಿದ್ದ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು ಹಾಗೂ ಮೌಲ್ಯಮಾಪನ ಕುಲಸಚಿವರು ಕಾರ್ಯಕ್ರಮಕ್ಕೆ ಗೈರು ಉಳಿಯುವ ಮೂಲಕ ಕನಕದಾಸರಿಗೆ ಅವಮಾನ ಮಾಡಿದ್ದಾರೆ. ಆ ಮೂಲಕ ಇಡೀ ಕುರುಬ ಸಮಾಜವನ್ನು ಹಗುರವಾಗಿ ಕಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಾತ್ರವಲ್ಲ, ಕನಕದಾಸರ ಜಯಂತಿಗೆ ಕಡ್ಡಾಯವಾಗಿ ಗೈರು ಉಳಿದಿದ್ದ ಈ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಲಿತ ಮುಖಂಡ ಶಿವಕುಮಾರ ಬಣ್ಣೂರ ಮಾತನಾಡಿ, ಮಹಾನ್ ಪುರುಷರ ಜಯಂತಿಗೆ ಅವಮಾನ ಮಾಡಿದ ಈ ಅಧಿಕಾರಿಗಳ ನಡೆ ಅಕ್ಷಮ್ಯ ಅಪರಾಧ. ಮುಂದಿನ ದಿನಗಳಲ್ಲಿ ಕನಕದಾಸರ ಜಯಂತಿ ಸೇರಿದಂತೆ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಕಡೆಗಣಿಸಿದರೆ, ನಾವು ಸುಮ್ಮನೆ ಕೂರಲ್ಲ ಎಂದರು.

ವಿನಾಯಕ ಮಾತನಾಡಿ, ಕನಕದಾಸರ ಜಯಂತಿಗೆ ಗೈರು ಉಳಿಯುವ ಮೂಲಕ ಸಮಾಜ ಹಾಗೂ ಮಹಾನ್ ವ್ಯಕ್ತಿಗೆ ಅವಮಾನ ಮಾಡಿದ್ದನ್ನು ಬಲವಾಗಿ ಖಂಡಿಸಿದರು.

ಪ್ರತಿಭಟನೆಯಲ್ಲಿ ಚನ್ನಪ್ಪ ಸೈದಾಪುರ, ಕನಕದಾಸ ಬೀರಣ್ಣವರ, ಸಚಿನ್ ದಳವಾಯಿ, ಸಂಗಮೇಶ ಕವಡಿಮಟ್ಟಿ, ಉಮೇಶ ಬೆಂಕಿ, ರವಿ ಕಿತ್ತೂರ, ನಿಂಗರಾಜ್, ಮಲ್ಲು ದಿನ್ನಿ, ಮೋಹನ ಮೇಟಿ, ಯಲ್ಲಾಲಿಂಗ ಗಣಿ, ಔದುಸಿದ್ಧ ಒಡೆಯರ, ಬಂಗಾರೆಪ್ಪ ಒಡೆಯರ, ಲಕ್ಕು ಹಳ್ಳಿ, ಶ್ರೀಕಾಂತ ತೊರವಿ, ರೇವಣಸಿದ್ಧ ತೊರವಿ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

# ಖೋಟಾನೋಟು ಚಲಾವಣೆ: ಇಬ್ಬರು ಆರೋಪಿಗಳಿಗೆ 3 ವರ್ಷ ಶಿಕ್ಷೆ

**ವಿಜಯಪುರ :** ಖೋಟಾ ನೋಟು ತಯಾರಿಸಿ ಚಲಾವಣೆ ಮಾಡುತ್ತಿದ್ದ ಆರೋಪಿಗಳಿಗೆ 3 ವರ್ಷ ಜೈಲು ಶಿಕ್ಷೆ ಹಾಗೂ 1.50 ಲಕ್ಷ ರೂಪಾಯಿ ದಂಡ ವಿಧಿಸಿ ಇಲ್ಲಿನ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಸೋಹೆಲ್ ಮುರ್ತುಜಾಸಾಬ ಇನಾಮದಾರ ಹಾಗೂ ಸುಮನ್ ಬಸವರಾಜ ಬಂಗಾರಿ ಶಿಕ್ಷೆಗೀಡಾಗಿದ್ದಾರೆ.

ಈ ಆರೋಪಿಗಳು 2019ರಲ್ಲಿ ಕಲರ್ ಝುರಾಕ್ಸ್ ಯಂತ್ರ, ಪೇಪರ್ ಹಾಗೂ ಪೇಪರ್ ಕಟರ್, ಇಂಚು ಪಟ್ಟಿಗಳ ಸಹಾಯದಿಂದ ಬಸವನಬಾಗೇವಾಡಿಯ ಇಂದಿರಾ ನಗರದಲ್ಲಿರುವ ಬಾಡಿಗೆ ಮನೆಯಲ್ಲಿ 100 ರೂ. ಸರ್ಕಾರಿ ಮಾನ್ಯತೆ ಪಡೆದ ನೋಟುಗಳನ್ನು ಕಲರ್ ಝುರಾಕ್ಸ್ ಮಾಡಿ ಚಲಾವಣೆಗೆ ಯತ್ನಿಸಿದ್ದರು. ಈ ಬಗ್ಗೆ ಮುದ್ದೇಬಿಹಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಿಚಾರಣೆ ಕೈಗೆತ್ತಿಕೊಂಡ ನ್ಯಾಯಾಧೀಶ ಮಂಜುನಾಥ ಸಂಗ್ರೇಶಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಬಿ.ಡಿ. ಬಾಗವಾನ ವಾದ ಮಂಡಿಸಿದ್ದರು.

# ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಠಿಕ ಆಹಾರ ಬೇಕು

**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಠಿಕ ಆಹಾರ ತುಂಬಾ ಮುಖ್ಯ. ಬಹಳಷ್ಟು ವಿದ್ಯಾರ್ಥಿಗಳಿಗೆ ಇದರ ಬಗ್ಗೆ ಜಾಗೃತಿ ಇಲ್ಲ. ಪೋಷಕಾಂಶಗಳಿರುವ ತರಕಾರಿ, ಹಣ್ಣುಗಳು, ಪೋಷಕಾಂಶವುಳ್ಳ ಆಹಾರ ಸೇವಿಸಿ ಸದೃಢ ದೇಹವನ್ನು ಹೊಂದಬೇಕು. ಪರಿಣಾಮಕಾರಿ ಕಲಿಕೆಗೆ ಉತ್ತಮ ಆರೋಗ್ಯವು ಕೂಡ ಬೇಕು. ಬಗ9ರ್, ಫಿಜ್ಜಾ, ಬೇಕರಿ ಪದಾರ್ಥಗಳಿಂದ ಮಕ್ಕಳು ದೂರವಿರಬೇಕು ಎಂದು ಖ್ಯಾತ ಮಕ್ಕಳ ತಜ್ಞ ಡಾ. ಅಭಿನಂದನ ಡೋರ್ಲೆ ಅಭಿಪ್ರಾಯಪಟ್ಟರು.




ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯಲ್ಲಿ ಇತ್ತೀಚೆಗೆ ಹಮ್ಮಿಕೊಂಡ ರಬಕವಿ ಬನಹಟ್ಟಿ ತಾಲೂಕಿನ ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಜರುಗಿದ ವಿಚಾರಗೋಷ್ಠಿಯಲ್ಲಿ ಉಪನ್ಯಾಸ ನೀಡಿದ ಅವರು ಒಳ್ಳೆಯ ಹವ್ಯಾಸಗಳು, ಆಚಾರ ವಿಚಾರಗಳು ಕೂಡ ಉತ್ತಮ ಆರೋಗ್ಯ ಹೊಂದಲು ಪೂರಕವಾಗಿದ್ದು, ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು ಶಿಕ್ಷಣದತ್ತ ಗಮನ ಹರಿಸಬೇಕು ಎಂದರು.

ಪೋಷಕಾಂಶವುಳ್ಳ ಆಹಾರ, ಒಳ್ಳೆಯ ಹವ್ಯಾಸ ಹಾಗೂ ದಿನನಿತ್ಯದ ವ್ಯಾಯಾಮಗಳಿಂದ ಮನಸ್ಸು, ಬುದ್ಧಿ, ದೇಹ ಪ್ರಫುಲ್ಲಿತಗೊಂಡು ಉತ್ತಮ ಆರೋಗ್ಯ ಲಭಿಸುತ್ತದೆ ಎಂದರು.

ಹಿರಿಯ ಸಾಹಿತಿ ಜಿ. ಎಸ್. ವಡಗಾಂವಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬಹಳಷ್ಟು ಅವಕಾಶಗಳು ಮಕ್ಕಳನ್ನು ಕೈಚಾಚಿ ಕರೆಯುತ್ತಿವೆ. ಆರೋಗ್ಯಕ್ಕೆ ಮಾರಕವಾಗುವ ಅಂಶಗಳನ್ನು ದೂರವಿಟ್ಟು ಉತ್ತಮ ಹವ್ಯಾಸಗಳನ್ನು ರೂಡಿಸಿಕೊಳ್ಳಬೇಕು. ಮಕ್ಕಳ ಸಾಹಿತ್ಯ ಸಮ್ಮೇಳನ ಮಕ್ಕಳ ಪ್ರತಿಭಾ ಅನಾವರಣಕ್ಕೆ ಪೂರಕವಾಗಿದೆ ಎಂದರು.

ವೇದಿಕೆಯ ಮೇಲೆ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಖಜಾಂಚಿ ಎಸ್. ಕೆ. ಕರಡಿ, ರಾಹುಲ್ ಬಾಬಗೊಂಡ, ಸಮ್ಮೇಳನದ ಸರ್ವಾಧ್ಯಕ್ಷೆ ಸುಹಾನಿ ಗಿರೀಶ ಮುತ್ತೂರ, ಶ್ರೀಶೈಲ ಬುರ್ಲಿ, ತಾಲೂಕು ಅಧ್ಯಕ್ಷೆ ಶೈಲಾ ಮಿರ್ಜಿ, ಮುಖ್ಯಾಧ್ಯಾಪಕ ಸುಭಾಷ ಹಟ್ಟಿ ಆಸೀನರಾಗಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪದ್ಮಾವತಿ ಅಂತರಾಷ್ಟ್ರೀಯ ಶಾಲೆಯ ವಿದ್ಯಾರ್ಥಿ ಪ್ರಶಾಂತಯ್ಯ ಹಿರೇಮಠ ವಹಿಸಿದ್ದರು.

ಯಲ್ಲಟ್ಟಿಯ ಕೊಣ್ಣೂರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಅನುಶ್ರೀ ಬಾಣಕಾರ, ಆಕಾಶ ಹುಂಡೆಕರ ಸೊಗಸಾಗಿ ನಿರೂಪಿಸಿದರು. ಸಂತೋಷ ಕರಿಜಾಡರ ಸ್ವಾಗತಿಸಿದರು. ಕೊನೆಗೆ ಸಂಜು ಮಹಾಜನ ವಂದಿಸಿದರು.

# ವಿಧಾನಸಭೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಿಎಂ ಸಿದ್ದರಾಮಯ್ಯನವರ ನಾಯಕತ್ವಕ್ಕೆ ಸಿಕ್ಕ ಜಯ ಲಾಡ್ಲೇಮಶಾಕ ನಾಯ್ಕೋಡಿ ಬಣ್ಣನೆ

**ಮುದ್ದೇಬಿಹಾಳ :** ರಾಜ್ಯದ ಮೂರು ಕ್ಷೇತ್ರಗಳಲ್ಲಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ದೊಡ್ಡ ಗೆಲವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಾಯಕತ್ವ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿದ ಐದು ಗ್ಯಾರೆಂಟಿಗಳೆ ಕಾರಣ ಎಂದು ಸಹಕಾರಿ ಧುರೀಣ ಕಾಂಗ್ರೆಸ್ ಪಕ್ಷದ ಮುಖಂಡರು ಲಾಡ್ಲೇಮಶಾಕ ನಾಯ್ಕೋಡಿ ಅವರು ತಿಳಿಸಿದರು ತಮ್ಮ ಗೃಹ ಕಚೇರಿಯಲ್ಲಿ ಮಾತನಾಡಿದರು, ಶಿಗ್ಗಾವಿ. ಸೊಂಡೂರು.ಮತ್ತು ಚನ್ನಪಟ್ಟಣ. ಈ ಮೂರು ಕ್ಷೇತ್ರಗಳಲ್ಲಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ರಾಜ್ಯದ ಜನತೆ ಪ್ರತಿಪಕ್ಷಗಳ ಸುಳ್ಳು ಆರೋಪಗಳಿಗೆ ತಕ್ಕ ಉತ್ತರ ನೀಡಿದ್ದಾರೆ ಎಂದು ಹೇಳಿದರು,ಹಳೆ ಮೈಸೂರ, ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ನಡೆದ ಉಪ ಚುನಾವಣೆಯಲ್ಲಿ ಅಭಿವೃದ್ಧಿಗೆ ಒಲವು,ಐದು ಗ್ಯಾರಂಟಿಗಳಿಂದ ಗೆಲುವನ್ನು ಸಾಧಿಸಿದ್ದಾರೆ, ಶಿಗ್ಗಾವಿಯಲ್ಲಿ ವಚನಭ್ರಷ್ಟರಿಗೆ ಮತದಾರರು ತಕ್ಕ ಉತ್ತರ ನೀಡಿ-ದ್ದಾರೆ, ಕಾಂಗ್ರೆಸ್ ಪಕ್ಷದ ನಾಯಕರು ಸ್ಥಳೀಯ ಮುಖಂಡರು ಪಕ್ಷದ ಕಾರ್ಯಕರ್ತರು ಮೂರು ಉಪ ಚುನಾವಣೆಯಲ್ಲಿ ಗೆಲುವಿಗೆ ಹಗಲಿರಳು ಶ್ರಮಿಸಿದ್ದಾರೆ,ಎಲ್ಲರ ಸಂಘಟಿತ ಪ್ರಯತ್ನಕ್ಕೆ ಈ ಗೆಲುವಿನ ಹಾರ ಸಂಧಿಸಿದೆ, ಉತ್ತಮ ನಾಯಕತ್ವ ನೀಡಿ ಮಾರ್ಗದರ್ಶನ ಮಾಡಿದ ಕಾಂಗ್ರೆಸ್ ಪಕ್ಷದ ಹೈಕಮಾಂಡ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿ ಮತ್ತು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರು ಹಾಗೂ ಎಲ್ಲ ಕಾಂಗ್ರೆಸ್ ಪಕ್ಷದ ಸಚಿವರು, ಶಾಸಕರಿಗೆ ಈ ಗೆಲುವಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು, ಇದು ರಾಜ್ಯ ಕಾಂಗ್ರೆಸ್ ಸರ್ಕಾರದ ಉತ್ತಮ ಆಡಳಿತಕ್ಕೆ ಸಂದ ಜಯ, ಇನ್ನಾದರೂ ವಿರೋಧ ಪಕ್ಷದವರು ಅಪಪ್ರಚಾರ ಮಾಡುವುದನ್ನು ಬಿಟ್ಟು ಸರ್ಕಾರದೊಂದಿಗೆ ಕೈಜೋಡಿಸಿ ಅಭಿವೃದ್ಧಿಯ ಕಡೆ ಗಮನಹರಿಸಿ ಎಂದು ತಿಳಿಸಿದರು,ಈ ಸಂದರ್ಭದಲ್ಲಿ ಅಮಾನತ್ ಬ್ಯಾಂಕಿನ ಅಧ್ಯಕ್ಷ ಎಂ ಡಿ ನದಾಫ,ನಿರ್ದೇಶಕರು ಎಂ ಬಿ ಜಕ್ಕೆರಾಳ,ಐ ಜೆ ದಖನಿ, ಕಾಂಗ್ರೆಸ್ ಪಕ್ಷದ ಮುಖಂಡರಗಳು ರಾಮಣ್ಣ ಕುಂಟೆ-ೂಜಿ (ಅಮರಗೋಳ) ಅಜೀಜ ಢವಳಗಿ, ಉಪಸ್ಥಿತರಿದ್ದರು.



# ಗೃಹಲಕ್ಷ್ಮೀ ತಾಂತ್ರಿಕ ಸಮಸ್ಯೆಗಳಿಗೆ ಸಹಾಯವಾಣಿ

**ಬಾಗಲಕೋಟೆ :** ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿಗಳು ನೋಂದಣಿಯಾಗುವ ಹಂತದಲ್ಲಿ ಗೊಂದಲ, ಮಾರ್ಗದರ್ಶನ ಹಾಗೂ ನೋಂದಣಿ ನಂತರದ ಬ್ಯಾಂಕ್ ಇ-ಕೆವೈಸಿ, ಆಧಾರ ನಾಟ್ ಸೀಡೆಡ್, ಬ್ಯಾಂಕ್ ಇನ್ ಎಕ್ಟಿವ್, ಅಕೌಂಟ್ ಇನ್ ಎಕ್ಟಿವ್, ಇಕೆವೈಸಿ ಸಕ್ಸೆಸ್‌ಫುಲ್ ಇತ್ಯಾದಿ ವಿವಿಧ ತಾಂತ್ರಿಕ ಸಮಸ್ಯೆಗಳ ಕುಂದುಕೊರತೆಗಳನ್ನು ಬಗೆಹರಿಸಲು, ಮಾಹಿತಿ ನೀಡಲು ಮಹಿಳಾ ಕಲ್ಯಾಣ ಶಾಖೆಯಿಂದ ಚಾಲ್ತಿಯಲ್ಲಿರುವ ಮಹಿಳಾ ಸಹಾಯವಾಣಿ ಸಂ.181 ಸಂಪರ್ಕಿಸುವಂತೆ ಬಾಗಲಕೋಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಮೇಶ ಸೂಳಿಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಲೋಕಾಪುರ :** ಪಟ್ಟಣದ ಠಾಣಿಕೇರಿ ಓಣಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಯ ಭೂಮಿ ಪೂಜಾ ಸಮಾರಂಭದಲ್ಲಿ ಬಾಗಲಕೋಟೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಿರಿಯ ಕಲಾವಿದರಾದ ದುರಗವ್ವ ಕಾಳಮ್ಮನವರ ಹಾಗೂ ದುರಗವ್ವ ರೊಡ್ಡಪ್ಪನವರ ಅವರನ್ನು ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಸನ್ಮಾನಿಸಿದರು.

# ಹೈನುಗಾರಿಕೆ ಸಾಧನೆಗೆ ಉದ್ಯಮಿ ಪ್ರಕಾಶ ದೇಸಾಯಿಗೆ ಪ್ರಶಸ್ತಿ 400 ಹಸುಗಳಿಂದ ಸಾವಿರ ಲೀ. ಹಾಲು ಉತ್ಪಾದಿಸುತ್ತಿರುವ ಉದ್ಯಮಿ





**ರಬಕವಿ-ಬನಹಟ್ಟಿ :** ಉದ್ಯಮಿಯೊಬ್ಬರು ಕೃಷಿಯಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಅದಮ್ಯ ಉತ್ಸಾಹವಿದ್ದವರು. ಅದಕ್ಕೆ ನೀರೆರೆದ ಪತ್ನಿಯ ಸಹಕಾರ ಇಂದು ಹೈನುಗಾರಿಕೆಯಲ್ಲಿ ಅಧಿಕ ಮತ್ತು ಗುಣಮಟ್ಟದಹಾಲುಉತ್ಪಾದನೆಯಮೂಲಕ ರಾಜ್ಯದಲ್ಲಿಯೇ ಎರಡನೇ ಸ್ಥಾನದೊಂದಿಗೆ ಉತ್ತಮ ಸಾಧನೆ ಮಾಡಿರುವ ಪ್ರಕಾಶ ದೇಸಾಯಿ ಮಂಗಳವಾರ ಬೆಂಗಳೂರಿನ ಬಾಬು ರಾಜೇಂದ್ರಪ್ರಸಾದ ಅಂತರಾಷ್ಟ್ರೀಯ ಸಭಾಂಗಣದಲ್ಲಿ 'ಪ್ರಗತಿಪರ ಹೈನುಗಾರರ ತಾಂತ್ರಿಕ ವಿಚಾರಗೋಷ್ಠಿ'ಯಲ್ಲಿ ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ರಿಂದ ಪ್ರಶಸ್ತಿ ಪಡೆದುಕೊಂಡರು.

25 ವರ್ಷಗಳಿಂದ ಸಿಹಿ ತಿನಿಸುಗಳಿಂದ 'ಮಹಾವೀರ ಸ್ವೀಟ್ ಫ್ಯಾಕ್ಟರಿ' ನಡೆಸುತ್ತಿರುವ ಪ್ರಕಾಶ ಕಳೆದೊಂದು ದಶಕದಿಂದ ಹೈನುಗಾರಿಕೆಯತ್ತ ಹೆಚ್ಚು ಗಮನ ಹರಿಸಿದರು. ಅದಕ್ಕಾಗಿ ಪ್ರಾರಂಭದಲ್ಲಿ ಫ್ಯಾಕ್ಟರಿಗೆ ಬೇಕಾಗುವಷ್ಟು ಹಾಲಿನ ಸಾಮರ್ಥ್ಯದಲ್ಲಿ ಮಾತ್ರ ಹೈನುಗಾರಿಕೆ ನಡೆಸುತ್ತಾ ಬಂದ ಇವರು, ನಂತರದಲ್ಲಿ ಹೈನುಗಾರಿಕೆಗೆ ಹೆಚ್ಚು ಒತ್ತು ಕೊಟ್ಟು ಇಂದು ರಾಜ್ಯದಲ್ಲಿಯೇ ಅಧಿಕ ಮತ್ತು ಗುಣಮಟ್ಟದ ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನ ಪಡೆದು ಸಾಧನೆ ಮೆರೆದಿದ್ದಾರೆ.

ಪ್ರಕಾಶ ತಮ್ಮ 25 ಎಕರೆಯಷ್ಟು ವಿಸ್ತೀರ್ಣದಲ್ಲಿ 2014 ರಿಂದ ಪ್ರಾರಂಭವಾದ ಹೈನುಗಾರಿಕೆ ಇಂದು ಬೃಹದಾಕಾರವಾಗಿ ಬೆಳೆಸಿದ್ದು, ಶೆಡ್ಗಳಲ್ಲಿ ವಿವಿಧ ತಳಿಯ ಹಸುಗಳನ್ನು ಸಾಕಿದ್ದಾರೆ. ಎಚ್‌ಎಫ್, ಜರ್ಸಿ, ಗೀರ್, ಕಾಂಕ್ರೇಜ್ ಮತ್ತು ಮುರಾ ಎಮ್ಮೆಗಳು ಸೇರಿ 400 ಹಾಲು ನೀಡುವ ಹಸುಗಳಿದ್ದರೆ, 300 ಕ್ಕೂ ಅಧಿಕ ಆಕಳ ಕರುಗಳು ಸೇರಿವೆ. ನಿತ್ಯ ಸಾವಿರ ಲೀಟರಿನಷ್ಟು ಹಾಲು ಉತ್ಪಾದನೆಯಾಗುತ್ತಿದೆ. ಹತ್ತಿರದ ಆಸಂಗಿಯ ಹಾಲು ಉತ್ಪಾದಕರ ಸಂಘಕ್ಕೆ ಕೊಡುತ್ತಿದ್ದಾರೆ.

ತಮ್ಮ ಫ್ಯಾಕ್ಟರಿಯಲ್ಲಿನ ಪದಾರ್ಥಗಳಿಗೆ ಬೇಕಾಗುವಷ್ಟು ಬಳಕೆ ಮಾಡಿಕೊಂಡು ಉಳಿದ ಹಾಲನ್ನು ಸಾವಿರ ಲೀಟರವರೆಗೆ ಕೊಡ ಮಾಡುತ್ತಿರುವದು ವಿಶೇಷವಾಗಿದೆ. ಒಂದು ವರ್ಷಕ್ಕೆ ಹಾಲು ಉತ್ಪಾದನೆಯಲ್ಲಿ ಕನಿಷ್ಠ 45 ರಿಂದ 50 ಲಕ್ಷ ರೂ.ಗಳ ಆದಾಯ ಬರುತ್ತಿದೆ ಎನ್ನುತ್ತಾರೆ ಪ್ರಕಾಶ.


ಕೃಷಿಯೊಂದಿಗೆ ಉದ್ಯೋಗಕ್ಕೆ ವಾಲಿದವರೇ ಹೆಚ್ಚು. ಆದರೆ ಇವರು ಉದ್ಯೋಗದಲ್ಲಿ ಕ್ರಾಂತಿ ಮಾಡುತ್ತ ಇದೀಗ ಹೈನುಗಾರಿಕೆಯಲ್ಲಿ ದಾಖಲೆ ಮೆರೆದಿದ್ದು ವಿಶೇಷವಾಗಿದೆ. ಹತ್ತು ವರ್ಷಗಳ ಅವಧಿಯಲ್ಲಿ ಹೈನುಗಾರಿಕೆಯಿಂದ ಬರೀ ಹಾಲು ಉತ್ಪಾದನೆ ಮಾತ್ರವಲ್ಲದೆ, ಸಗಣಿ ಗೊಬ್ಬರ, ಗಂಜಳದಿಂದ ರಾಸಾಯನಿಕ ಗೊಬ್ಬರ ಮತ್ತು ಔಷಧಿ ಬಳಸದೇ ಬರೀ ಸಾವಯವ ಗೊಬ್ಬರದ ಮೂಲಕವೂ ಉತ್ತಮ ಆದಾಯ ಗಳಿಸುತ್ತಿದ್ದಾರೆ.

ಹಸುಗಳಿಗೆ ಬೇಕಾಗಿರುವ ಮೇವನ್ನು ತಮ್ಮ ಜಮೀನಿನಲ್ಲಿಯೇ ಬೆಳೆಸಿಕೊಂಡು ಸೈಲೇಜ್ ಮಾಡಿಕೊಳ್ಳುವದರ ಮೂಲಕ ಸಂಗ್ರಹಿಸುತ್ತಾರೆ.

ಉದ್ಯೋಗದಲ್ಲಿಯೂ ಹೈನುಗಾರಿಕೆಯಲ್ಲಿ ಮೇಲುಗೈ ಸಾಧಿಸುವುದರೊಂದಿಗೆ ಹಲವಾರು ಪ್ರಶಸ್ತಿಗಳನ್ನು ಪಡೆದು ಸಾಧನೆ ಮೆರೆದಿದ್ದಾರೆ.

# ವಿಜ್ಞಾನ: ಈಗ ಗ್ಲೋಬಲ್ ಕೂಲಿಂಗ್!




1990 ರ ದಶಕದಲ್ಲಿ ಒಮ್ಮೆಲೇ ಏರುಗತಿಯನ್ನು ಪಡೆದು 1998 ರಲ್ಲಿ ಆತಂಕಕಾರಿ ಮಟ್ಟ ಏರಿದ ಜಾಗತಿಕ ತಾಪಮಾನ ಇದೀಗ ಇಳಿಮುಖದ ದಾರಿಯಲ್ಲಿದೆ. ಇದೇ ರೀತಿ ಮುಂದುವರಿದರೆ 2100 ರವರೆಗೂ ಗ್ಲೋಬಲ್ ವಾರ್ಮಿಂಗ್ನ ಯಾವುದೇ ಅಪಾಯಗಳು ಇಲ್ಲ ಎನ್ನಲಾಗಿದೆ. ಹಾಗಂತ ಗಟ್ಟಿ ನಿರ್ಧಾರಕ್ಕೆ ಬರುವ ಹಾಗೂ ಇಲ್ಲ.

ಜಗತ್ತಿನಲ್ಲೊಂದು ಅಚ್ಚರಿ ಸಂಭವಿಸಿದೆ ! ಯಾವ ವಿಜ್ಞಾನಿಗಳು ಜಾಗತಿಕ ತಾಪಮಾನ ಒಂದೇ ಸಮನೆ ಏರುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದರೋ ಅವರೇ ಈಗ ತಾಪಮಾನ ಇಳಿಮುಖವಾಗುತ್ತಿರುವ ಪರಿಯನ್ನು ಕಂಡು ಏನಪ್ಪಾ ಇದು ಅಂತ ಅಚ್ಚರಿ ಪಡುತ್ತಿದ್ದಾರೆ. ಹವಾಮಾನ ವಿಜ್ಞಾನಿಗಳೇ ಈ ತಾಪಮಾನ ಇಳಿಕೆಯ ಬಗ್ಗೆ ಚರ್ಚಿಸುತ್ತಿದ್ದಾರೆ ಮತ್ತು ಈ ಬಗ್ಗೆ ಅಧ್ಯಯನ ವರದಿಗಳೂ ಬರಲು ಆರಂಭಿಸಿವೆ.

ಜಾಗತಿಕ ತಾಪಮಾನ ಹೆಚ್ಚಳ (ಗ್ಲೋಬಲ್ ವಾರ್ಮಿಂಗ್) ಬಗ್ಗೆ ಆತಂಕದ ಛಾಯೆ ಹರಡಿದ್ದು 1990 ರ ದಶಕದಲ್ಲಿ. 1980 ರಿಂದಲೇ ಆರಂಭವಾಗಿದ್ದ ಏರುಗತಿ 1998 ರ ಹೊತ್ತಿಗೆ ಅಪಾಯದ ಮಟ್ಟ ತಲುಪಿತ್ತು. 1950 ರ ವಾತಾವರಣ ಉಷ್ಣತೆಯನ್ನು ಒಂದು ಬೆಂಚ್ ಮಾರ್ಕ್ ಆಗಿ ತೆಗೆದುಕೊಳ್ಳುವುದಾದರೆ 1998 ರ ಹೊತ್ತಿಗೆ ಇದು 0.28 ಡಿಗ್ರಿ ಸೆಲ್ಸಿಯಸ್ ಪ್ರಮಾಣದಷ್ಟು ಹೆಚ್ಚಾಗಿತ್ತು. ಒಂದೊಮ್ಮೆ ಇದೇ ಪರಿಯಲ್ಲಿ ಉಷ್ಣತೆ ಹೆಚ್ಚಿದರೆ ಜಗತ್ತು ಜಲಪ್ರಳಯವಾಗಿ ಹೋದೀತು ಎಂದು ಎಚ್ಚರಿಸಲಾಗಿತ್ತು. ಆದರೆ, ಅಚ್ಚರಿ ಎಂಬಂತೆ ಗ್ಲೋಬಲ್ ವಾರ್ಮಿಂಗ್ ಪ್ರಮಾಣ ಕಡಿಮೆಯಾಗುತ್ತಾ 2012 ರ ಹೊತ್ತಿಗೆ 1950 ಕ್ಕೆ ಹೋಲಿಸಿದರೆ 0.6 ಡಿಗ್ರಿಯಷ್ಟು ಹೆಚ್ಚುವರಿ ಉಷ್ಣತೆಯನ್ನಷ್ಟೇ ಹೊಂದಿದೆ. ಅಂದರೆ ಎಂಭತ್ತರ ದಶಕದಿಂದ ಏರುಗತಿಯಲ್ಲಿ ಸಾಗಿದ ಉಷ್ಣತಾಮಾನ 1998 ರ ಬಳಿಕ ಇಳಿಯುತ್ತಿದೆ. ಇದರರ್ಥ ಭೂಮಿ ತಣ್ಣಗಾಗುತ್ತಿದೆ. ನಾವು ಸುರಕ್ಷಿತವಾದೆವು ಎಂದೇ ?

**ಹಾಗಂತ ಸುಲಭದಲ್ಲಿ ಹೇಳುವ ಹಾಗಿಲ್ಲ.**

ಭೂಗೋಲದ ಮೇಲ್ಮೈ ಉಷ್ಣತಾಮಾನದ ಏರಿಳಿತಗಳಿಗೆ ಕಾರಣಗಳು ಒಂದೆರಡಲ್ಲ. ಆವತ್ತು ಏಕ್ದಂ ಭೂಮಿಯ ಉಷ್ಣತೆ ಏರಿದಾಗ, ಹೆಚ್ಚುತ್ತಿರುವ ಕ್ಲೋರೋಫ್ಲೋರೋ ಕಾರ್ಬನ್ಗಳು (ಸಿಎಫ್ಸಿ) ಓಝೋನ್ ಪದರವನ್ನು ಹರಿದುಹಾಕಿ ನೀಲಾತೀತ ಕಿರಣಗಳ ನೇರ ಪ್ರವೇಶಕ್ಕೆ ದಾರಿ ಮಾಡಿಕೊಟ್ಟು ಉಷ್ಣಾಂಶ ಹೆಚ್ಚಳ ಮತ್ತು ರೋಗಗಳಿಗೆ ಕಾರಣವಾದುದಲ್ಲದೆ ಈ ಹಸಿರುಮನೆ ಅನಿಲಗಳು ಭೂಮಿಯ ಉಷ್ಣವನ್ನು ಹೊರಹೋಗದಂತೆಯೂ ತಡೆದವು ಎನ್ನುವುದು ದೊಡ್ಡ ವಾದವಾಗಿತ್ತು. ಮಾಂಟ್ರಿಯಲ್ ಒಪ್ಪಂದದ ಬಳಿಕ ಸಿಎಫ್ಸಿ ಬಳಕೆ ನಿಷೇಧಿಸಿ ಎಚ್ಎಫ್ಸಿ ( ಹೈಡ್ರೋಫ್ಲೋರೋ ಕಾರ್ಬನ್ ) ಗಳ ಬಳಕೆ ಹೆಚ್ಚಿತು. ಸಿಎಫ್ಸಿ ಬಳಕೆ ನಿಷೇಧವೊಂದೇ ಜಾಗತಿಕ ಉಷ್ಣತೆಯನ್ನು ತಗ್ಗಿಸಿತು ಎಂದು ಹೇಳುವ ಹಾಗಿಲ್ಲ. ಯಾಕೆಂದರೆ, ಬಿಸಿಯೇರುವ ಪ್ರಕ್ರಿಯೆ ಹಲವು ಸೂಕ್ಷ್ಮ ಸಂಗತಿಗಳನ್ನು ಒಳಗೊಂಡಿದೆ.

ಗಾಳಿಯ ಬೀಸುವಿಕೆ ಮತ್ತು ಎದ್ದೇಳುವ ಪ್ರವಾಹಗಳು, ಜತೆಗೆ ಜ್ವಾಲಾಮುಖಿ ಈ ಮೂರು ಅಂಶಗಳು ಕೂಡಾ ಉಷ್ಣತಾಮಾನದ ಮೇಲೆ ಗಾಢ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಉಷ್ಣತೆಗಿಂತಲೂ ಉಷ್ಣ ಶಕ್ತಿಯನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ಹೆಚ್ಚು ವಿಸ್ತಾರವಾದ ಅರ್ಥ ಸಿಗಬಹುದು.

**ಮೂರು ಕಾರಣಗಳು**

ಉಷ್ಣ ಶಕ್ತಿಯನ್ನು ಆಧರಿಸಿ ಹೇಳುವುದಾದರೆ, ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಉಷ್ಣತಾಮಾನ ವಿಪರೀತ ಹೆಚ್ಚಳವಾಗದೆ ಇರುವುದಕ್ಕೆ ಮೂರು ಕಾರಣಗಳನ್ನು ನೀಡಬಹುದು.

1) ಸೂರ್ಯನೇ ಡಲ್ : ಇತ್ತೀಚಿನ ವರ್ಷಗಳಲ್ಲಿ ಸೂರ್ಯನ ಉಷ್ಣತೆಯೇ ಕಡಿಮೆಯಾಗಿದೆ. ಅಂದರೆ ಕಡಿಮೆ ಉಷ್ಣ ಶಕ್ತಿ ಭೂಮಿಗೆ ತಲುಪುತ್ತಿದೆ. ಸೂರ್ಯನ ಉಷ್ಣ ಶಕ್ತಿ ಪ್ರತಿ ಹನ್ನೊಂದು ವರ್ಷದ ಆವರ್ತನಕ್ಕೊಮ್ಮೆ ಹೆಚ್ಚು – ಕಡಿಮೆ ಆಗುತ್ತದೆ. ಸೂರ್ಯನ ಉಷ್ಣತೆ ಕಡಿಮೆಯಾಗಿದೆ ಎನ್ನುವುದನ್ನು ಸೋಹೋ ಉಪಗ್ರಹವೇ ಗುರುತಿಸಿದೆ.

2) ಹೆಚ್ಚಿನ ಉಷ್ಣ ಶಕ್ತಿ ವಾತಾವರಣದ ಮೇಲ್ಭಾಗದಿಂದಲೇ ತಪ್ಪಿಸಿಕೊಂಡು ಹೋಗುತ್ತದೆ. ಇದಕ್ಕೆ ಸಂಭಾವ್ಯ ಕಾರಣ, ವಾತಾವರಣದಲ್ಲಿ ಹೆಚ್ಚುತ್ತಿರುವ ಗಂಧಕದ ಏರೋಸಾಲ್ಗಳ ಮಟ್ಟ. ಇವು ಸೂರ್ಯನ ಕಿರಣಗಳು ಭೂಮಿಗೆ ಬರುವುದನ್ನು ತಡೆಯುವುದಿಲ್ಲ ಬದಲಾಗಿ ಸೂರ್ಯನ ಉಷ್ಣ ಶಕ್ತಿಯನ್ನು ಮರಳಿ ಬಾಹ್ಯಾಕಾಶಕ್ಕೆ ಪ್ರತಿಫಲಿಸುತ್ತವೆ. ಗಂಧಕದ ಏರೋಸಾಲ್ಗಳು ಪ್ರಮುಖವಾಗಿ ಹುಟ್ಟುವುದು ಜ್ವಾಲಾಮುಖಿಗಳಿಂದ ಮತ್ತು ಕಲ್ಲಿದ್ದಲನ್ನು ಉರಿಸುವುದರಿಂದ. ಇವೆರಡೂ ಚಟುವಟಿಕೆಗಳು ಈಗ ಹೆಚ್ಚಿವೆ.

3) ಭೂಮಿ ಎಷ್ಟೇ ಪ್ರಮಾಣದ ಉಷ್ಣ ಶಕ್ತಿಗೆ ತುತ್ತಾದರೂ ಅದರ ಗರಿಷ್ಠ ಭಾಗವನ್ನು ಎಳೆದುಕೊಳ್ಳುವುದು ಸಾಗರ. ಒಟ್ಟಾರೆ ಉಷ್ಣ ಶಕ್ತಿಯ 96 ಶೇಕಡಾ ಭಾಗವನ್ನು ನೀರು ಎಳೆದುಕೊಂಡರೆ ನೆಲ ಮತ್ತು ಮಂಜುಗಡ್ಡೆಗೆ ದೊರೆಯುವುದು ಶೇಕಡಾ 4 ಮಾತ್ರ. ನೀರಿಗೆ ಗಾಳಿಗಿಂತಲೂ ಹೆಚ್ಚು ಉಷ್ಣ ಶಕ್ತಿಯನ್ನು ಆಧರಿಸುವ ತಾಕತ್ತು ಇರುವುದರಿಂದ ಜಾಗತಿಕ ಉಷ್ಣಾಂಶಕ್ಕೆ ಅದರ ಕಾಟ ಕಡಿಮೆಯಾಗುತ್ತದೆ.

**ಪ್ರವಾಹದ ಅಪಾಯ**

ಆದರೆ, ಸಾಗರದ ನೀರು ಬಿಸಿಯಾಗುವುದು ಬೇರೆ ಅಪಾಯಗಳಿಗೆ ಕಾರಣವಾಗುವ ಸಾಧ್ಯತೆಗಳೂ ಇವೆ. 1998 ರಲ್ಲಿ ಬೀಸಿದ ಎಲ್ ನಿನೋ ಚಂಡಮಾರುತ ಬಿಸಿಯಾದ ಸಾಗರದ ನೀರನ್ನು ದಡ ಮುಟ್ಟಿಸಿತು. ಇದರಿಂದ 1998 ಎನ್ನುವುದು ಗರಿಷ್ಠ ಉಷ್ಣಾಂಶದ ವರ್ಷವಾಗಿ ದಾಖಲಾಯಿತು. ಎಲ್. ನಿನೋ ಬಂದಿದ್ದು ಪೂರ್ವದ ಗಾಳಿಯಿಂದ. ಕಳೆದ ಹದಿನೈದು ವರ್ಷಗಳಿಂದ ಎಲ್. ನಿನೋ ಮತ್ತೇ ಬಂದಿಲ್ಲ. ಬಳಿಕ ಪಶ್ಚಿಮದ ಗಾಳಿ ಹೊತ್ತು ತಂದ 'ಲಾ. ನಿನಾ' ಪ್ರವಾಹಗಳು ಸ್ವಲ್ಪ ಮಟ್ಟಿಗೆ ಭೂಮಿಯ ಮೇಲ್ಮೈ ಉಷ್ಣಾಂಶವನ್ನು ಕಡಿಮೆ ಮಾಡಿವೆ.

**ಏರುತ್ತಿರುವ ಸಾಗರ**

ಹಿಂದೆ ಗ್ಲೋಬಲ್ ವಾರ್ಮಿಂಗ್ನಿಂದಾಗಿ ಸಾಗರದ ಮಟ್ಟ ಏರುತ್ತಿದೆ ಎಂದು ಹೇಳಲಾಗುತ್ತಿತ್ತು. ಈಗ ಗ್ಲೋಬಲ್ ವಾರ್ಮಿಂಗ್ ಪ್ರಮಾಣ ಕಡಿಮೆಯಾಗಿದ್ದರೂ ನೀರಿನ ಮಟ್ಟ ಹೆಚ್ಚಳದ ವೇಗ ಹಾಗೇ ಇದೆ. ಒಂದು ಲೆಕ್ಕಾಚಾರದ ಪ್ರಕಾರ, ಸಾಗರ ಮಟ್ಟ ಪ್ರತಿ ವರ್ಷಕ್ಕೆ ಮೂರು ಮಿಲಿಮೀಟರನಷ್ಟಾದರೂ ಹೆಚ್ಚುತ್ತಿದೆ. ಇದರಲ್ಲಿ ಒಂದು ಮಿಮೀ ಸಾಗರದ ನೀರು ಬಿಸಿಯಾಗಿ ಹಿಗ್ಗುವುದರ ಪರಿಣಾಮವಾದರೆ, ಉಳಿದದ್ದು ಮಂಜುಗಡ್ಡೆ ಕರಗಿ ನೀರಾದದ್ದು.

**ಮುಂದೇನು ? :** ಭೂಮಿಯ ವಾತಾವರಣದ ತಾಪಮಾನ ಹಿಂದೆ ಭಯಪಟ್ಟಷ್ಟು ವೇಗವಾಗಿ ಹೆಚ್ಚುತ್ತಿಲ್ಲ ಎನ್ನುವುದು ತುಂಬ ನೆಮ್ಮದಿಯ ಸಂಗತಿ. ಆದರೆ, ಸಮುದ್ರದ ಉಷ್ಣತಾಮಾನ ಹೆಚ್ಚಳ ಮತ್ತು ನೀರಿನ ಮಟ್ಟ ಹೆಚ್ಚಳ ಯಾವತ್ತಿದ್ದರೂ ಅಪಾಯಕಾರಿಯೇ. ಎಲ್ ನಿನೋದಂತಹ ಪ್ರವಾಹಗಳು ಹುಟ್ಟಿಕೊಂಡರೆ ಅದು ಎಲ್ಲವನ್ನೂ ತಿರುವುಮುರುವು ಮಾಡ?ಬಲ್ಲುದು ಮತ್ತು ಎರಡು ಮೂರು ದಶಕಗಳಿಗೊಮ್ಮೆ ಇಂಥ ಸಾಧ್ಯತೆಗಳು ನಿಚ್ಚಳ. ನೀರು ಜಲಪ್ರಳಯ ಸೃಷ್ಟಿಸುವ ಅಪಾಯ ಜಾಸ್ತಿ. ಒಂದೊಮ್ಮೆ ವೇಗದ ಗಾಳಿ ಬೀಸಿದರೆ ತಾಪದ ಪರಿಣಾಮವೂ ತಣ್ಣಗಾಗುವ ಸಾಧ್ಯತೆ ಜತೆಗೆ ಇನ್ನೂ ಕೆಲವು ದಶಕ ಈಗಿರುವ ಸ್ಥಿತಿಯೇ ಮುಂದುವರಿಯಬಹುದು.

**ಏನೂ ಹೇಳುವ ಹಾಗಿಲ್ಲ.**

ಜಾಗತಿಕ ತಾಪಮಾನ ಇಳಿಮುಖವಾಗುತ್ತಿದೆ ಅಂತ ಸುರಕ್ಷಿತ ಮನೋಸ್ಥಿತಿಯನ್ನು ಹೊಂದುವ ಹಾಗೇ ಇಲ್ಲ. ಯಾಕೆಂದರೆ ಹವಾಮಾನ ವೈಪರೀತ್ಯಗಳು ಯಾವುದೇ ಕ್ಷಣ ಏನನ್ನು ಬೇಕಾದರೂ ಸೃಷ್ಟಿಸಬಹುದು. ಇತ್ತೀಚೆಗೆ ಕೊಲರೆಡೋ ಕಂಡ ಭಯಂಕರ ಮಳೆ, ಆಸ್ಟ್ರೇಲಿಯಾದ ದಾಖಲೆಯ ಉಷ್ಣತೆ ಮತ್ತು ಹಯಾನ್ ಚಂಡಮಾರುತ ನಮ್ಮನ್ನು ಬೆದರಿಸುತ್ತಲೇ ಇರುತ್ತದೆ.

**– ಶಿವಾನಂದ ಜಂಬಗಿ ಅಥಣಿ.**

## ಬಾಗಲಕೋಟ ತಾಲೂಕ ಉರ್ದು ಶಿಕ್ಷಕರ ಸಂಘಕ್ಕೆ ಅಧ್ಯಕ್ಷರಾಗಿ ಐ.ಡಿ. ಅತ್ತಾರ ಆಯ್ಕೆ



**ಬಾಗಲಕೋಟೆ :** ತಾಲೂಕಿನ ಉರ್ದು ಶಿಕ್ಷಕರ ಸರ್ವ ಸಾಧರಣ ಸಭೆಯಲ್ಲಿ ಕರ್ನಾಟಕ ರಾಜ್ಯ ಉರ್ದು ಶಿಕ್ಷಕರ ಅಸೋಸಿಯೇಷನ್ ಬೆಂಗಳೂರು ಜಿಲ್ಲಾ ಶಾಖೆ ಬಾಗಲಕೋಟೆರವರ ಆಶ್ರಯದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಂ.ಎ. ಸೌದಾಗರ್ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ತಾಲೂಕಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಬಾಗಲಕೋಟ ತಾಲೂಕ ಉರ್ದು ಶಿಕ್ಷಕರ ಸಂಘಕ್ಕೆ ಅಧ್ಯಕ್ಷರಾಗಿ ಐ.ಡಿ. ಅತ್ತಾರ ಉಪಾಧ್ಯಕ್ಷರಾಗಿ ಶ್ರೀಮತಿ ಎಂ.ಎಂ. ಪಟೇಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಇಬ್ರಾಹಿಂ ಮನಿಯಾರ ಇತರೆ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು ಎಂದು ಸಂಘದ ಜಿಲ್ಲಾಧ್ಯಕ್ಷ ಎಂ.ಎ. ಸೌದಾಗರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಚಿವ ಆರ್.ಬಿ. ತಿಮ್ಮಾಪುರ ಭೂಮಿ ಪೂಜೆ

**ಲೋಕಾಪುರ :** ಜನರ ಹಿತದೃಷ್ಟಿಯಿಂದ ಪಟ್ಟಣದಲ್ಲಿ ಅಭಿವೃದ್ಧಿ ಕೆಲಸಗಳು ಗಮನಕ್ಕೆ ತಂದರೆ ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಜನಪರ ಕೆಲಸ ಮಾಡುವುದರ ಜೊತೆಗೆ ಮುಧೋಳ ಮತಕ್ಷೇತ್ರದ ಅಭಿವೃದ್ಧಿಯ ಕಾರ್ಯಗಳಿಗೆ ಬದ್ಧನಾಗಿದ್ದೇನೆ ಎಂದು ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರಹೇಳಿದರು.ಬುಧವಾರಪಟ್ಟಣದ ಠಾಣಿಕೇರಿ ಓಣಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಯ ಭೂಮಿ ಪೂಜಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಕೆಆರ್ಐಡಿಎಲ್ ಅನುದಾನದಡಿಯಲ್ಲಿ ಸುಮಾರು 20 ಲಕ್ಷ ರೂಗಳ ವೆಚ್ಚದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣವಾಗಲಿದೆ. ಸ್ಥಳಿಯರ ಸಲಹೆ ಸೂಚನೆಪಡೆದುಕಾಮಗಾರಿಯನ್ನುನಿಗದಿತ ಸಮಯದಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.



ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಜಿಲ್ಲಾ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಶಿವಾನಂದ ಉದಪುಡಿ, ಯುವ ಮುಖಂಡ ಗುರುರಾಜಉದಪುಡಿ,ಸದುಗೌಡಪಾಟೀಲ, ಬೀರಪ್ಪಮಾಯನ್ನವರ,ಆನಂದಹಿರೇಮಠ, ಹೊಳಬಸು ದಂಡಿನ, ಮಹಾನಿಂಗಪ್ಪ ಹುಂಡೇಕಾರ, ಅಯ್ಯಪ್ಪಗೌಡ ಪಾಟೀಲ, ಮಂಜುಗೌಡ ಪಾಟೀಲ, ಗಣಪತಿ ಗಸ್ತಿ, ಮಹೇಶ ಪುಜಾರಿ, ಲೋಕಣ್ಣ ಉಳ್ಳಾಗಡ್ಡಿ, ವಿಠ್ಠಲ ಆನೆಗುದ್ದಿ, ಮುತ್ತಪ್ಪ ಚೌಧರಿ, ಶಿವಪ್ಪ ರೊಡ್ಡಪ್ಪನವರ, ಯಮನಪ್ಪ ಕಾಳಮ್ಮನವರ, ಸಿದ್ದಪ್ಪ ಪರಸನ್ನವರ, ಮಹಾದೇವ ಹುಗ್ಗಿ, ಮರಗಪ್ಪ ಮುದಕವಿ, ಹಣಮಂತ ಪರಸನ್ನವರ, ಮರಗಪ್ಪ ಜುನ್ನಪ್ಪನವರ, ಅಬ್ದುಲ್ ರಹಿಮಾನ್ ತೊರಗಲ್, ಸುಲ್ತಾನ್ ಕಲಾದಗಿ, ಸೈಯ್ಯದ ಗುದಗಿ, ರವಿ ರೊಡ್ಡಪ್ಪನವರ, ಕುಮಾರ ಕಾಳಮ್ಮನವರ, ಸುರೇಶ ಮಾದರ, ರಮೇಶ ಪರಸಪ್ಪಗೋಳ, ವಿವಿಧ ಇಲಾಖೆ ಅಧಿಕಾರಿಗಳು, ಪಟ್ಟಣ ಪಂಚಾಯತ ಸಿಬ್ಬಂದಿ ಇದ್ದರು.



**ಲೋಕಾಪುರ : ಪಟ್ಟಣದ ಠಾಣಿಕೇರಿ ಓಣಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಯ ಭೂಮಿ ಪೂಜಾ ಸಮಾರಂಭದಲ್ಲಿ ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು, ಠಾಣಿಕೇರಿ ಓಣಿಯ ಹಿರಿಯರು, ನಿವಾಸಿಗಳು ಸನ್ಮಾನಿಸಿದರು.**

## ಹಳದೂರು ಗ್ರಾಪಂ: ಲಕ್ಷ್ಮೀಬಾಯಿ ವಾಲ್ಮೀಕಿ ಅವಿರೋಧ ಆಯ್ಕೆ



**ಗುಳೇದಗುಡ್ಡ :** ಸಮೀಪದ ಹಳದೂರು ಗ್ರಾಮ ಪಂಚಾಯತಿಯಲ್ಲಿ ಸದಸ್ಯರೊಬ್ಬರು ಮೃತರಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪಾದನಕಟ್ಟಿ ಗ್ರಾಮದ ಲಕ್ಷ್ಮೀಭಾಯಿ ಆಸಂಗೆಪ್ಪ ವಾಲ್ಮೀಕಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ ಬೆನ್ನೂರ ತಿಳಿಸಿದ್ದಾರೆ. ಅವರು ಹಳದೂರು ಗ್ರಾಮ ಪಂಚಾಯತಿ ಸಭಾ ಭವನದಲ್ಲಿ ಅವಿರೋಧವಾಗಿ ಆಯ್ಕೆಗೊಂಡ ನೂತನ ಸದಸ್ಯೆ ಲಕ್ಷ್ಮೀಭಾಯಿ ಆಸಂಗೆಪ್ಪ ವಾಲ್ಮೀಕಿ ಅವರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಪಾದನಕಟ್ಟಿ ಗ್ರಾಮದ ದೇವಕ್ಕೆವ್ವ ಭರಮಪ್ಪ ವಾಲ್ಮೀಕಿ ಅವರು ಮೃತರಾದ ಹಿನ್ನೆಲೆಯಲ್ಲಿ ನೂತನ ಸದಸ್ಯರ ಆಯ್ಕೆಗೆ ಚುನಾವಣೆ ನಡೆಸಲಾಯಿತು. ಅನುಸೂಚಿತ ಪಂಗಡ ಮಹಿಳೆಗೆ ಮೀಸಲಿದ್ದ ಸದಸ್ಯ ಸ್ಥಾನಕ್ಕೆ ಲಕ್ಷ್ಮೀಭಾಯಿ ವಾಲ್ಮೀಕಿ ಅವರೊಬ್ಬರೆ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು.

ನೂತನ ಸದಸ್ಯೆ ಲಕ್ಷ್ಮೀಭಾಯಿ ಆಸಂಗೆಪ್ಪ ವಾಲ್ಮೀಕಿ ಅವರಿಗೆ ಸದಸ್ಯತ್ವದ ಪ್ರಮಾಣ ಪತ್ರ ವಿತರಣೆಯ ಈ ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮುತ್ತವ್ವ ಯಲ್ಲಪ್ಪ ಕೊಳಮಲಿ,ಉಪಾಧ್ಯಕ್ಷಬಸವನಗೌಡಯಲಗೂರದಪ್ಪ ಗೌಡ್ರ, ಸದಸ್ಯರಾದ ಲಕ್ಷ್ಮಣ ನಾಗರಾಳ, ಹನಮಂತ ದನದಮನಿ, ಚಂದ್ರವ್ವ ಮಾದರ, ಮುಖಂಡರಾದ ಪಿಕೆಪಿಎಸ್ ಮಾಜಿ ಅಧ್ಯಕ್ಷ ಯೋಗಪ್ಪ ಕೊಟ್ನಳ್ಳಿ, ನೀಲಕುಮಾರ ಬಳಬಟ್ಟಿ, ಹನಮಂತಗೌಡ ಗೌಡ್ರ, ಪಿಕೆಪಿಎಸ್ ಸದಸ್ಯ ಯಮನಪ್ಪ ವಾಲ್ಮೀಕಿ, ಗ್ರಾಪಂ ಮಾಜಿ ಅಧ್ಯಕ್ಷ ಯಂಕಣ್ಣ ಭೀಮನಗಡೆ, ಮುದಕಪ್ಪ ಹೊಸಮನಿ, ಸುರೇಶ ಗೌಡ್ರ, ರಾಮನಗೌಡ ಗೌಡ್ರ, ಮಾನಪ್ಪ ವಾಲ್ಮೀಕಿ, ಶಂಕರಗೌಡ ಗೌಡ್ರ, ರಂಗಪ್ಪ ಕೊಟ್ನಳ್ಳಿ, ರಂಗಪ್ಪ ಸಂಗಾಪೂರ, ಗದಿಗೆಪ್ಪ ಕಂಬಳಿ, ನಾರಾಯಣ ಭೀಮನಗಡೆ, ಹೊಳೆಪ್ಪ ಕಂಬಳಿ, ಕೂಬಣ್ಣ ಮ್ಯಾಗಿಲಮನಿ, ಹನಮಂತ ದಿವಟಗಿ, ಮಲ್ಲಪ್ಪ ಮ್ಯಾಗಿಲಮನಿ, ರಂಗಪ್ಪ ದಿವಟಗಿ, ಲಕ್ಷ್ಮಣ ದಿವಟಗಿ ಇತರರು ಇದ್ದರು.

### ನರ್ಸಿಂಗ್ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಾಗಾರ | ಜಾಗೃತ ಪೋಸ್ಟರಗಳ ಬಿಡುಗಡೆ

## ಮಕ್ಕಳ ಬಾಲ್ಯ ರಕ್ಷಣೆ, ಪೋಷಣೆಗೆ ಹರಿತವಾದ ಕಾಯ್ದೆ: ರಾಮತ್ನಾಳ

**ಬಾಗಲಕೋಟೆ :** ಮಕ್ಕಳ ಬಾಲ್ಯ ರಕ್ಷಣೆ ಹಾಗೂ ಪೋಷಣೆ ಮಾಡುವದರ ಜೊತೆಗೆ ತೀರ್ವವಾಗಿ ಮಕ್ಕಳಿಗೆ ತೊಂದರೆ ಕೊಡುವಂತವರಿಗೆ ಶಿಕ್ಷಿಸುವಂತಹರಿತವಾದಕಾಯ್ದೆಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆಯಾಗಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಹೇಳಿದರು.

ನವನಗರದ ಸಜ್ಜಲಶ್ರೀ ವಿಜ್ಞಾನ ಮಹಾ ವಿದ್ಯಾಲಯದ ಸಭಾಭವನದಲ್ಲಿ ಬುಧವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ,ಜಿಲ್ಲಾಡಳಿತ,ಜಿ.ಪಂ ಜಿಲ್ಲಾ ಪೊಲೀಸ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಮಕ್ಕಳ ರಕ್ಷಣಾ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ ನರ್ಸಿಂಗ್ ವಿದ್ಯಾರ್ಥಿಗಳಿಗೆ ಬಾಲ್ಯವಿವಾಹ, ಪೋಕ್ಸೋ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ನಿಷೇಧ ಕುರಿತ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ರಕ್ಷಣೆಗೆ ಕಠಿಣವಾದ ಕಾಯ್ದೆಗಳನ್ನು ಜಾರಿಗೆ ತಂದರು ಸಹ ಸಮರ್ಪಕವಾಗಿ ಕಾಯ್ದೆ ಅನುಷ್ಠಾನಗೊಳ್ಳುತ್ತಿಲ್ಲ. ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಯ್ದೆ ಕುರಿತು ಅರಿವು ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿತ್ತು. ಆದರೆ ಈಗ ಆಯೋಗವು ಸಮಾಜಮುಖಿ ಕಾರ್ಯದಲ್ಲಿ ತೊಡಗುವ ನರ್ಸಿಂಗ್ ವಿದ್ಯಾಥಿಗಳನ್ನು ಕೇಂದ್ರಿಕೃತವನ್ನಾಗಿ ಮಾಡಿ ಅರಿವು ಮೂಡಿಸಲು ಮೂಡಿಸಲು ಮುಂದಾಗಿದೆ. ಈ ಹಿನ್ನಲೆಯಲ್ಲಿ ಮುಖ್ಯವಾಗಿ ಬಾಲ್ಯವಿವಾಹ, ಪೋಸ್ಕೋ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ನಿಷೇಧ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ಆಸ್ಪತ್ರೆಗಳಲ್ಲಿ ಬರುವ ಪ್ರಕರಣಗಳಲ್ಲಿ ಮುಖ್ಯವಾಗಿ ಬಾಲ ಗರ್ಭಿಣಿಯರು, ಬೇರೆ ಬೇರೆ ಸಾಮಾಜಿಕ ಕಾರಣಗಳಿಂದ ಹೆತ್ತು ಬಿಟ್ಟುಹೋಗಿರುವ ಮಗು ಹಾಗೂ ಲಿಂಗಪತ್ತೆ, ಭ್ರೂಣ ಹತ್ಯೆ ಪ್ರಕರಣ ಈಡೀ ರಾಜ್ಯದ ಗಮನ ಸೆಳೆದಿರುವ ಘಟನೆ ನಡೆದಿದೆ. ಮಕ್ಕಳ ರಕ್ಷಣೆಗಾಗಿ ಇರುವ ಕಾಯ್ದೆ ನಿಮಗೆ ತಿಳುವಳಿಕೆ ಇದ್ದಲ್ಲಿ ಮಕ್ಕಳ ರಕ್ಷಣೆ ಮಾಡಬಹುದೆಂಬ ಉದ್ದೇಶ ಆಯೋಗ ಹೊಂದಿದೆ. ಆದ್ದರಿಂದ ನರ್ಸಿಂಗ್ ಕಲಿತು ಕೆಲಸ ಮಾಡುವ ಸಂದರ್ಭದಲ್ಲಿ ಇಂತಹ ಪ್ರಕರಣಗಳನ್ನು ತಡೆಯುವಲ್ಲಿ ತಮ್ಮ ಪಾತ್ರ ಮುಖ್ಯವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಮಾತನಾಡಿ ತಾಯಿಯ ಗರ್ಭದಲ್ಲಿ ಇರುವಾಗಲೇ ಮಕ್ಕಳ ಹಕ್ಕುಗಳು ಆರಂಭವಾಗುತ್ತವೆ. ಮಗುವ 5 ವರ್ಷದವರೆ ತಾಯಿ ಪೋಷಣೆ ಮುಖ್ಯವಾಗಿರುತ್ತದೆ. ಆದ್ದರಿಂದ ಆ ಮಗುವಿನ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾಳೆ.

ಮಕ್ಕಳ ಹಕ್ಕುಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಸಮಾಜ ಪರಿವರ್ತನೆಗೆ ಮುಂದಾಗಬೇಕು ಎಂದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮಾಜಿ ಸದಸ್ಯೆ ತೇಜಶ್ವಿನಿ ಹಿರೇಮಠ ಪೋಕ್ಸೋ ಕಾಯ್ದೆ ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಜಾಗೃತಿಯ ಪೋಸ್ಟರಗಳನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಹನಮಂತಗೌಡ ಪಾಟೀಲ, ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ದಿಲೀಪ ನಾಟೇಕಾರ, ಪ್ರಾಧ್ಯಾಪಕಿ ಜಯಶ್ರೀ ಇಟಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಮಂಗಳಾ ಹಿರೇಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಉದ್ಯಮಿಗಳಾಗಿ ಉದ್ಯೋಗ ನೀಡಿ: ಎಂ.ವಾಯ್. ಕಟ್ಟಿ



**ಮಹಾಲಿಂಗಪುರ:** ಕೃಷಿಉದ್ಯಮದಲ್ಲಿ ಹಲವಾರು ಅವಕಾಶಗಳಿವೆ ಅವುಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು, ನೀವು ಉದ್ಯಮಿಗಳಾಗಿ ಸಾಕಷ್ಟು ಜನರಿಗೆ ಉದ್ಯೋಗ ನಿರ್ಮಾಣ ಮಾಡುವ ವ್ಯಕ್ತಿಗಳಾಗಿ ಬೆಳೆಯಬೇಕು ಎಂದು ರೋಹಿಣಿ ಬಯೋಟೆಕ್‌ನ ಸಂಸ್ಥಾಪಕ ಅಧ್ಯಕ್ಷರು ಹಾಗೂ ಉದ್ಯಮಿ ಡಾ.ಎಂ.ವೈ.ಕಟ್ಟಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಪದವಿ ಕಾಲೇಜಿನಲ್ಲಿ ಅರ್ಥಶಾಸ್ತ್ರ ಮತ್ತು ಕೃಷಿ ಮಾರುಕಟ್ಟೆ ವಿಭಾಗದ ವತಿಯಿಂದಆಯೋಜಿಸಿದ್ದಪರ್ಯಾಯವೃತ್ತಿಯಾಗಿ ಉದ್ಯಮಶೀಲತೆ ಎಂಬ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮತನಾಡಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ಎಮ್. ಅವರಾದಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ ವಿದ್ಯಾರ್ಥಿಗಳು ಕೇವಲ ನೌಕರಿ ಬಯಸದೇ ಉದ್ಯಮಕ್ಕೂ ಪ್ರಾಮುಖ್ಯತೆ ನೀಡಬೇಕು. ಇವತ್ತಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರಿಗೂ ನೌಕರಿ ದೊರೆಯುವುದು ಕಷ್ಟ. ನೌಕರಿ ಸಿಗದೆ ಇದ್ದವರಿಗೆ ಉದ್ಯಮದ ಬಾಗಿಲು ಯಾವಾಗಲೂ ತೆರೆದಿರುತ್ತದೆ ಎಂದರು. ಉಪನ್ಯಾಸಕರಾದ ಶ್ರೀಮತಿ ಎಸ್.ಆಯ್. ಹೊಸುರಮಠ, ರಾಜು ಚೌಗಲಾ, ಬಸವರಾಜ ಪಾಗದ ಮತ್ತು ವಿದ್ಯಾರ್ಥಿಗಳು ಇದ್ದರು. ಐಕ್ಯೂಎಸ್‌ಸಿ ಸಂಯೋಜಕಿ ಹಾಗೂ ಅರ್ಥಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ.ಸುನಂದಾ ಸೋರಗಾಂವಿ ಸ್ವಾಗತಿಸಿ–ಪರಿಚಯಿಸಿದರು. ಉಪನ್ಯಾಸಕಿ ಶ್ರೀಮತಿ ಎಸ್.ಆಯ್.ಹೊಸೂರಮಠ ವಂದಿಸಿದರು. ಕುಮಾರಿ ನಿರ್ಮಲಾ ಮಿರ್ಜಿ ನಿರೂಪಿಸಿದರು.

# ಜಗತ್ತಿನಲ್ಲಿ ಅತೀ ದೊಡ್ಡ ಸಂವಿಧಾನ ನಮ್ಮದು: ಡಾ.ಕೆ.ಎಂ.ಅವರಾದಿ



**ಮಹಾಲಿಂಗಪುರ :** ಜಗತ್ತಿನಲ್ಲಿ ಅತೀ ದೊಡ್ಡ ಸಂವಿಧಾನ ನಮ್ಮದು. ಸಂವಿಧಾನದಲ್ಲಿ ಬದುಕಿನ ಮೌಲ್ಯಗಳು ಇವೆ.

ಸ್ವತಂತ್ರ, ಸಮಾನತೆ, ನ್ಯಾಯ ಪರತೆ, ಭತೃತ್ವ ಭಾವ ಬೆಳೆಯುವಂತೆ ಮಾಡುವುದು.ನಮ್ಮ ಸಂವಿಧಾನ ಬದಲಾದ ಕಾಲಘಟ್ಟಕ್ಕೆ ಹೊಂದಿಕೊಳ್ಳುವ ಸಂವಿಧಾನವಾಗಿದೆ ಎಂದು ಡಾ.ಕೆ.ಎಂ.ಅವರಾದಿ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪದವಿ ಮಹಾವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ವಿಭಾಗ ಮತ್ತು ಎನ್.ಎಸ್.ಎಸ್ ಘಟಕದ ಸಹಯೋಗದೊಂದಿಗೆ ಜರುಗಿದ ಸಂವಿಧಾನ ದಿನಾಚರಣೆಯ ಅಧ್ಯಕ್ಷತೆವಹಿಸಿಮಾತನಾಡಿದರು.

ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಅಭಯ ಉಗಾರೆ ಮಾತನಾಡಿ ಬಹಳಷ್ಟು ವೀರ ಮಹನೀಯರು ಪ್ರತಿಫಲವಾಗಿಸ್ವತಂತ್ರಸಿಕ್ಕಿತು.ನಮ್ಮಸಂವಿಧಾನಜಾರಿಗೆ ಬರಲು ಬಹಳ ಸಮಯ ಬೇಕಾಯಿತು.ಸಂವಿಧಾನ ರಚನಾ ಕಾರ್ಯದಲ್ಲಿ ಮಹನೀಯರು ಪತ್ರ ಬಹಳ ದೊಡ್ಡದು. ಪ್ರಸ್ತುತ ಸರಕಾರ ಸಂವಿಧಾನಕ್ಕೆ ಗೌರವ ನೀಡಿ, ಸಂವಿಧಾನದ ಪೀಠಿಕೆಯನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಓದುವಂತೆ ಸೂಚನೆ ನೀಡಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳಿಗೆ ಪ್ರಾಚಾರ್ಯ ಡಾ.ಕೆ.ಎಮ್ ಅವರಾದಿ ಸಂವಿಧಾನ ಪಸ್ತಾವಣೆ ಬೋಧಿಸಿದರು. ಡಾ.ಅಂಬೇಡ್ಕರ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಸಂವಿಧಾನ ದಿನಾಚರಣೆ ಕಾಲೇಜಿನ ಐಕ್ಯೂಎಸ್‌ಸಿ ಸಂಯೋಜಕಿ ಡಾ.ಸುನಂದಾ ಸೋರಗಾಂವಿ, ಸಿಬ್ಬಂದಿ ಕಾರ್ಯದರ್ಶಿ ಆರ್.ಎಸ್.ಪೂಜಾರಿ, ಪಿ.ಎಮ್.ಗೌಳಿ, ಟಿ.ಡಿ. ಡಂಗಿ, ಬಸವರಾಜ ಪಾಗದ ಮತ್ತು ವಿದ್ಯಾರ್ಥಿಗಳು ಇದ್ದರು.

## 81ನೇ ಜಯಂತಿ ಉತ್ಸವ

# ಅಧ್ಯಾತ್ಮ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಶಿವಕುಮಾರಶ್ರೀ: ಸಹಜಾನಂದ ಸ್ವಾಮಿಜಿ





**ಮಹಾಲಿಂಗಪುರ :** ಬೀದರ ಶಿವಕುಮಾರ ಶ್ರೀಗಳಿಂದಾಗಿ ಮಹಾಲಿಂಗಪುರದಲ್ಲಿ ಅಧ್ಯಾತ್ಮಕ್ಷೇತ್ರಕ್ಕೆ ಬಹಳ ಲಾಭವಾಗಿದೆ. ಬೀದರಶ್ರೀಗಳು ಉತ್ತರ ಕರ್ನಾಟಕದಲ್ಲಿ ಅಧ್ಯಾತ್ಮ ಮತ್ತು ಶಿಕ್ಷಣ ಎರಡು ಕ್ಷೇತ್ರಗಳಲ್ಲಿ ಬಹುದೊಡ್ಡ ಕ್ರಾಂತಿಯನ್ನು ಮಾಡಿದ ಪೂಜ್ಯರಾಗಿದ್ದಾರೆ ಎಂದು ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮಿಜಿ ಹೇಳಿದರು.

ಸ್ಥಳೀಯ ಬಸವಾನಂದ ಶಿಕ್ಷಣ ಸಂಸ್ಥೆಯ ವತಿಯಿಂದ ಬುಧವಾರ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ಜರುಗಿದ ವೇದಾಂತಾಚಾರ್ಯ ಬೀದರ ಶಿವಕುಮಾರ ಮಹಾಸ್ವಾಮಿಜಿಯವರ 81ನೇ ಜಯಂತಿ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಬೀದರ ಶಿವಕುಮಾರ ಮಹಾಸ್ವಾಮಿಜಿಯವರು ಜಗದ್ಗುರು ಸಿದ್ಧಾರೂಢರ ಜನ್ಮಸ್ಥಳ ಚಳಕಾಪೂರದಲ್ಲಿ ಬೃಹತ್ ಸಿದ್ಧಾರೂಢ ಮಂದಿರವನ್ನು ನಿರ್ಮಿಸಿ, ಸಿದ್ಧಾರೂಢರ ಹೆಸರನ್ನು ಅಜರಾಮರವಾಗಿಸಿದ್ದಾರೆ. ಶ್ರೀಗಳು ಶತಾಯುಷಿಗಳಾಗಿ ಅವರಿಂದ ಅಧ್ಯಾತ್ಮ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಇನ್ನು ಹೆಚ್ಚಿನ ಲಾಭ ಸಿಗುವಂತಾಗಲಿ.

ಮಹಾಲಿಂಗಪುರವು ವೇದಾಂತದ ತವರುಮನೆಯಾಗಲು ಪ್ರಕರಣ ಪ್ರವೀಣ ಬಸವಾನಂದ ಸ್ವಾಮಿಜಿ, ಬೀದರಶ್ರೀಗಳ ಪರಿಶ್ರಮ ಕಾರಣವಾಗಿದೆ. ವಿದ್ಯಾರ್ಥಿಗಳು ಕಾಕದೃಷ್ಟಿ, ಬಕ ಧ್ಯಾನ, ಶ್ವಾನನಿದ್ರಾ, ಅಲ್ಪಾಹಾರಿ, ಬ್ರಹ್ಮಚಾರಿ ಎಂಬ ಐದು ಲಕ್ಷಗಳನ್ನು ಹೊಂದಿರಬೇಕು. ಶಿಕ್ಷಣ ಸಂಸ್ಥೆಯ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಪರಿಶ್ರಮ ಮುಖ್ಯವಾಗಿರುತ್ತದೆ ಎಂದರು.

ಅಧ್ಯಕ್ಷತೆವಹಿಸಿದ್ದ ಶರಣಶ್ರೀ ಮಲ್ಲೇಶಪ್ಪ ಕಟಗಿ ಮಾತನಾಡಿ ಆರೂಢ ಸತ್‌ಸಂಪ್ರಾದಾಯ ತ್ರಿಮೂರ್ತಿಗಳಲ್ಲಿ ಒಬ್ಬರಾದ ಬೀದರದ ಶಿವಕುಮಾರ ಸ್ವಾಮಿಜಿ ಅವರು ಜಗದ್ಗುರು ಸಿದ್ಧಾರೂಢರು ತೋರಿದ ಅದ್ವೈತ ವೇದಾಂತವನ್ನು ತಮ್ಮ ವಾಕ್‌ಚಾತುರ್ಯದಿಂದ ನಾಡಿನೆಲ್ಲಡೆ ಪ್ರಚುರಪಡಿಸಿ ಮುಮುಕ್ಷುಗಳನ್ನು ಉದ್ಧರಿಸುತ್ತಿದ್ದಾರೆ. ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೆಯಾದ ಕೊಡುಗೆಯನ್ನು ಸಲ್ಲಿಸುತ್ತಿರುವ ಶ್ರೀಗಳ ಅನನ್ಯ ಸಾಧನೆಯಿಂದ ಸಂತರ ಜನನದಿಂದ ಜಗದ ಕಲ್ಯಾಣ ಎಂಬ ವಾಣಿಯು ನಿಜವಾಗಿದೆ ಎಂದರು.

ಮುತ್ತೈದೆಯರು ತೊಟ್ಟಿಲು ತೂಗಿ ಶಿವಕುಮಾರಶ್ರೀಗಳ ನಾಮಕರಣ ಮಹೋತ್ಸವ ನೇರವೇರಿಸಿದರು. ಸಿದ್ಧಾನಂದ ಭಾರತಿ ಸ್ವಾಮಿಜಿ, ಕುಲಗೋಡದ ಶರಣೆ ಗೀತಾತಾಯಿ, ಸಿದ್ರಾಮಯ್ಯ ಗೋಠೆ ಮಾತನಾಡಿದರು. ಬಸವಾನಂದ ಶಿಕ್ಷಣ ಸಂಸ್ಥೆಯ ಸದಸ್ಯರಾದ ಡಾ.ಬಿ.ಡಿ.ಸೋರಗಾಂವಿ, ಬಸವರಾಜ ಢಪಳಾಪೂರ, ಎಂ.ಪಿ.ಅಂಗಡಿ, ಪ್ರಭು ಬೆಳಗಲಿ, ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಅಲ್ಲಪ್ಪ ಗುಂಜಿಗಾಂವಿ, ಮಲ್ಲಪ್ಪ ಭಾಂವಿಕಟ್ಟಿ, ಲಕ್ಕಪ್ಪ ಚಮಕೇರಿ, ಚಂದ್ರಶೇಖರ ಮೋರೆ, ಹಿರಿಯರಾದ ಶ್ರೀಶೈಲಪ್ಪ ಉಳ್ಳೇಗಡ್ಡಿ, ನಾರಾಯಣ ಕಿರಗಿ, ಶ್ರೀಶೈಲಪ್ಪ ಬಾಡನವರ, ಈಶ್ವರ ಚಮಕೇರಿ, ಶಂಕರೆಪ್ಪ ಹಣಗಂಡಿ, ಸಿದ್ದಪ್ಪ ನಿಂಬರಗಿ, ಮಲಕಾಜಪ್ಪ ಅಂಬಿ, ಮಲ್ಲು ನಿಂಬರಗಿ, ಗಂಗಪ್ಪ ಕರಡಿ, ಹಣಮಂತ ಮೀರಾಪಟ್ಟಿ, ಶಿವಾನಂದ ಕಿತ್ತೂರ, ಸಂಜು ಜಮಖಂಡಿ ಸೇರಿದಂತೆ ಬಸವಾನಂದ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಬೀದರ ಶಿವಕುಮಾರಶ್ರೀಗಳ ಭಕ್ತರು ಇದ್ದರು.

ಮುಖ್ಯಗುರು ಎಸ್.ಕೆ.ಗಿಂಡೆ ಸ್ವಾಗತಿಸಿದರು. ಎಚ್.ಆಯ್.ಸುತಾರ ನಿರೂಪಿಸಿದರು. ಸಿದ್ಧಾರೂಢ ಮೂಗಳಖೋಡ ವಂದಿಸಿದರು.

# ನಿಜಗುಣರು ನಾಡು ಕಂಡ ಶ್ರೇಷ್ಠ ತತ್ವಜ್ಞಾನಿ: ಶರಣ ದುಂಡಪ್ಪಣ್ಣ ಮೆಟಗುಡ್ಡ



**ಮಹಾಲಿಂಗಪುರ :** ಶ್ರೀಮನ್ ನಿಜಗುಣ ಶಿವಯೋಗಿಗಳು ನಮ್ಮ ನಾಡಿನ ಮುಕ್ತಿ ಪದ್ಧತಿ ಪ್ರತಿಪಾದಕರು ಹಾಗೂ ನಾಡು ಕಂಡ ಶ್ರೇಷ್ಠ ತತ್ವಜ್ಞಾನಿ ಎಂದು ಶರಣ ದುಂಡಪ್ಪ ಮೆಟಗುಡ್ಡ ಹೇಳಿದರು.

ಪಟ್ಟಣದ ನೀಲಕಂಠೇಶ್ವರ ಮಠದಲ್ಲಿ ಕುರುವಿನಶೆಟ್ಟಿ ಸಮಾಜದ ಆಶ್ರಯದಲ್ಲಿ ವಿಶ್ವ ಶಾಂತಿಗಾಗಿ ಎಂಟು ದಿನಗಳವರೆಗೆ ನಡೆದ ವೇದಾಂತ ಪರಿಷತ್ ಕಾರ್ಯಕ್ರಮದ ಸಮಾರೋಪ ಮತ್ತು ಶ್ರೀಮನ ನಿಜಗುಣ ಶಿವಯೋಗಿಗಳ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ಗುರುವಿನಲ್ಲಿ ಯಾರಿಗೆ ಶ್ರದ್ಧೆ ಇರುತ್ತದೆಯೋ ಅವರಿಗೆ ಮಾತ್ರ ಜ್ಞಾನದ ಅರಿವು ಆಗುತ್ತದೆ. ಗುರುವಿನ ಗುಣಗಾನ ಮಾಡಿದವರಿಗೆ ಜೀವನಲ್ಲಿ ಮುಕ್ತಿ ಸಿಗುವುದು ಖಂಡಿತ, ಶಿವನಾಮ ಸ್ಮರಣೆಯಿಂದ ಮಾತ್ರ ಜೀವನ ಪಾವನ ಎಂದರು.

ಪ್ರವಚನಕಾರ ಕೋಲೂರಿನ ಶಂಭುಲಿಂಗಾಶ್ರಮದ ಕೃಷ್ಣಗೌಡ ಪಾಟೀಲ ಮಾತನಾಡಿ ಯಾವ ಕಾಲಕ್ಕೂ ಎಲ್ಲರಿಗಿಂತಲೂ ಗುರು ದೊಡ್ಡವನು. ಹರ ಮುನಿದರೆ ಗುರು ಕಾಯುವನು, ಗುರು ಮುನಿದರೆ ಹರ ಕಾಯಲಾರ. ಗುರುವಿನ ಉಪದೇಶ ಆಲಿಸಿ–ಪಾಲಿಸಬೇಕು. ಶಿವಾ ತಮ್ಮನ್ನು ಕರುಣೆ ತೋರಿ ನೋಡಬೇಕು, ನಿಜಗುಣರು ನಾಡಿನ ಬಹು ದೊಡ್ಡ ಜ್ಞಾನಿಗಳಾಗಿದ್ದರು ಎಂದರು.

ಜಯಂತಿ ಉತ್ಸವದ ನಿಮಿತ್ಯವಾಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜರುಗಿದ ಭಾವಚಿತ್ರ ಮೇರವಣಿಗೆ ಹಾಗೂ ಪಲ್ಲಕ್ಕಿ ಉತ್ಸವದಲ್ಲಿ ಶಾಸಕ ಸಿದ್ದು ಸವದಿ ಅವರು ಪಲ್ಲಕ್ಕಿ ಹೊತ್ತು ಗಮನ ಸೆಳೆದರು.

ಗಣ್ಯರಾದ ಶ್ರೀಮಂತ ಹಳ್ಳಿ, ಶಂಕರಗೌಡ ಪಾಟೀಲ, ಈರಪ್ಪ ಚುನಮುರಿ, ಸುರೇಶ ಗೋಲಭಾವಿ, ಶಿವಪ್ಪ ಹಳ್ಳಿ, ಎಂ.ಎಸ್. ಮೂಗಳಖೋಡ, ಶಿವಪ್ಪ ಕೊಡತಿ, ರವಿ ಮುಂಡಗನೂರ, ಶ್ರೀಶೈಲ ಬೀಸನಕೊಪ್ಪ, ಮಹೇಶ ಜಿಡ್ಡಿಮನಿ, ಹೊಳೆಪ್ಪ ಬಾಡಗಿ, ಮಹಾಲಿಂಗಪ್ಪ ಯಾದವಾಡ, ರಾಜೇಂದ್ರ ಮಿರ್ಜಿ, ಈರಣ್ಣ ಹಲಗತ್ತಿ, ಎಂ.ಆರ್. ತೇರದಾಳ, ಈರಪ್ಪ ಹುಣಶ್ಯಾಳ, ಜಿ.ಎಸ್.ಬರಗಿ, ಚೇತನ ಹುಣಶ್ಯಾಳ, ಪ್ರಕಾಶ ಮರೆಗುದ್ದಿ ಸೇರಿದಂತೆ ಹಲವರು ಇದ್ದರು.

# ಬಾಲ್ಯವಿವಾಹಮುಕ್ತಭಾರತಅಭಿಯಾನಕ್ಕೆಚಾಲನೆ–2030ಕ್ಕೆ ಬಾಲ್ಯವಿವಾಹ ಮುಕ್ತ ಭಾರತ ಮಾಡುವ ಗುರಿ




**ಬಾಗಲಕೋಟೆ :** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎಸ್ ಸಿ ನಂದಿಮಠ ಲಾ ಕಾಲೇಜಿನಲ್ಲಿ ಹಾಗೂ ರೀಚ್ ಸಂಸ್ಥೆ ಬಾಗಲಕೋಟ ಇವರ ಸಹಯೋಗದಲ್ಲಿ "ಬಾಲ್ಯವಿವಾಹ ಮುಕ್ತ ಭಾರತ" ಅಭಿಯಾನ ದೆಹಲಿಯಿಂದ ಕೇಂದ್ರ ಸರ್ಕಾರವು ಇಂದು 10:30ಕ್ಕೆ ಕಾರ್ಯಕ್ರಮವನ್ನು ದೇಶ ವ್ಯಾಪಿ ಲೈವ್‌ನಲ್ಲಿ ಚಾಲನೆ ನೀಡಿದರು. ನಮ್ಮ ಬಾಗಲಕೋಟೆಯಲ್ಲಿ ಅದೇ ರೀತಿ ಕಾರ್ಯಕ್ರಮವನ್ನುಶ್ರೀಚಂದ್ರಶೇಖರ್‌ದಿಡ್ಡಿ, ಸದಸ್ಯ ಕಾರ್ಯದರ್ಶಿಗಳು, ಗೌರವಾನ್ವಿತ ಹಿರಿಯ ದಿವಾನಿ ನ್ಯಾಯಾಧೀಶರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬಾಗಲಕೋಟರವರು ಚಾಲನೆ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನು ಕುಮಾರ ಮಾತನಾಡಿತ್ತಾ "ಬಾಲ್ಯವಿವಾಹ ಮುಕ್ತ ಭಾರತ"ಅಭಿಯಾನವುನಮ್ಮಬಾಗಲಕೋಟೆ ಬಾಲ್ಯವಿವಾಹದಲ್ಲಿ ಮುಂದಿದ್ದು 2 & 3ನೇ ಸ್ಥಾನಗಳಲ್ಲಿ ಇರುತ್ತದೆ ಅದನ್ನ ನಾವು ಶೂನ್ಯ ತರಬೇಕು ಎನ್ನುವುದಾದರೆ ಕೇವಲ ಸರ್ಕಾರ & ಅಧಿಕಾರಿಗಳು, ಸಂಘ ಸಂಸ್ಥೆಗಳು ಪ್ರಯತ್ನ ಮಾಡಿದರೆ ಸಾಲದು ಸಮುದಾಯ ಭಾಗವಹಿಸುವಿಕೆ ಹಾಗೂ ಅರಿವು ಅತಿ ಮುಖ್ಯ ತಾವೆಲ್ಲರೂ ಕಾನೂನು ವಿದ್ಯಾರ್ಥಿಗಳಾಗಿರುವುದ–ರಿಂದ ಮುಂದಿನ ದಿನಗಳಲ್ಲಿ ತಾವು ಕಾನೂನು ವೃತ್ತಿಜೀವನದಲ್ಲಿ ಇಂತಹ ಪ್ರಕರಣಗಳನ್ನು ನಿಭಾಯಿಸಿ ಮಕ್ಕಳ ಹಕ್ಕುಗಳ ರಕ್ಷಣೆ ಮಾಡುವುದು ಅತೀ ಅವಶ್ಯಕವಿದೆ. ಇಂದು ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಕೇಂದ್ರ ಸರ್ಕಾರದಿಂದ ಚಾಲನೆಯನ್ನು ನೀಡಲಾಗುತ್ತಿದೆ ಇದು 2030ಕ್ಕೆ ಬಾಲ್ಯವಿವಾಹ ಮುಕ್ತ ಭಾರತ ಮಾಡುವ ಗುರಿಯನ್ನು ಹೊಂದಿದೆ. ರೀಚ್ ಸಂಸ್ಥೆಯು ಜಸ್ಟ್ ರೈಟ್ ಫಾರ್ ಚಿಲ್ಡನ್ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ಕೆಲಸವನ್ನು ಮಾಡುತ್ತಿದೆ. ಬಾಲ್ಯವಿವಾಹ ನಿಲ್ಲಿಸುವುದು ಮತ್ತು ಮಕ್ಕಳ ಗ್ರಾಮ ಸಭೆಗಳನ್ನು ಮಾಡುವುದು ನಿಮ್ಮ ಜವಾಬ್ದಾರಿ ಎಂದು ತಿಳಿದು ಸ್ವಯಂ ಸೇವಕರಾಗಿ ಮುಂದಾಗಬೇಕೆಂದು ಕರೆ ನೀಡಿದರು.

"ಬಾಲ್ಯವಿವಾಹ ಮುಕ್ತ ಭಾರತ" ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಚಂದ್ರಶೇಖರ್ ದಿಡ್ಡಿ, ಸದಸ್ಯ ಕಾರ್ಯದರ್ಶಿಗಳು, ಗೌರವಾನ್ವಿತ ಹಿರಿಯ ದಿವಾನಿ ನ್ಯಾಯಾಧೀಶರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದವರು ಮಾಡಿದರು ಉದ್ಘಾಟನೆ ಭಾಷಣ ಮಾಡುತ್ತಾ ಭಾರತ ಸಂವಿಧಾನದ ಆರ್ಟಿಕಲ್ 14, 21 ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಬಗ್ಗೆ ಹಾಗೂ ಬಾಲ್ಯವಿವಾಹ ಮುಕ್ತ ಭಾರತವನ್ನು ಮಾಡುವುದರ ಬಗ್ಗೆ ಮಾತನಾಡಿದರು ನಂತರ ಪ್ರತಿಜ್ಞೆಯನ್ನು ಮುಂದಿನಂತೆ ಬೋಧಿಸಿದರು :

1. ಬಾಲ ವಿವಾಹದ ವಿರುದ್ಧ ಎಲ್ಲಾ ಸಾಧ್ಯವಾದ ಪ್ರಯತ್ನಗಳನ್ನು ಮಾಡುತ್ತೇನೆ.
2. ನನ್ನ ಕುಟುಂಬ, ಬಡಾವಣೆ ಅಥ–ವಾ ಸಮುದಾಯದಲ್ಲಿ ಯಾವುದೇ ಬಾಲ ವಿವಾಹ ನ ಡೆ ಯ ದಂ ತೆ ನೋಡಿಕೊಳ್ಳುತ್ತೇನೆ.
3. ಬಾಲ ವಿವಾಹದ ಯಾವುದೇ ಪ್ರಯತ್ನದ ಬಗ್ಗೆ ಪಂಚಾಯತ್ ಮತ್ತು ಸರ್ಕಾರಿ ಅಧಿಕಾರಿಗಳಿಗೆ ವರದಿ ಮಾಡುತ್ತೇನೆ.
4. ಎಲ್ಲಾ ಮಕ್ಕಳ ಶಿಕ್ಷಣ ಮತ್ತು ಸುರಕ್ಷತೆಗಾಗಿ ನನ್ನ ಧ್ವನಿಯನ್ನು ಎತ್ತುತ್ತೇನೆ ಮತ್ತು ಬಾಲ ವಿವಾಹ ಮುಕ್ತ ಭಾರತ ನಿರ್ಮಾಣಕ್ಕೆ ನಾನು ಬೆಂಬಲಿಸುತ್ತೇನೆ.

ನಂತರ ಬಾಲ್ಯವಿವಾಹ ನಿಷೇಧಿಸಲಾಗಿದೆ ಎಚ್ಚರ ಪೋಸ್ಟರ್, ಬಾಲ್ಯವಿವಾಹ ನಿಷೇಧ ಕಾಯ್ದೆ ವಿಶೇಷ ಕೈಪಿಡಿಯನ್ನು ಅನಾವರಣಗೊಳಿಸಿದರು. ಈ ಪ್ರತಿಗಳನ್ನು ಎಲ್ಲಾ ಸಿಬ್ಬಂದಿ ವರ್ಗಕ್ಕೆ ಮತ್ತು ವಿದ್ಯಾರ್ಥಿಗಳಿಗೆ ನೀಡಲಾಯಿತು. ಎಂ.ಪಿ ಚಂದ್ರಿಕಾ, ಪ್ರಾಚಾರ್ಯರುಎಸ್ ಸಿ ನಂದಿಮಠ ಲಾ ಕಾಲೇಜ್ ವಿದ್ಯಾಗಿರಿ, ಅವರು ಬಾಲ್ಯವಿವಾಹ ದಿಂದ ಸಮಾಜದಲ್ಲಿ ಆಗುವ ದುಷ್ಪರಿಣಾಮಗಳು ಮತ್ತು ಮಕ್ಕಳ ಹಕ್ಕುಗಳ ಕುರಿತು ತಿಳಿಸಿಕೊಟ್ಟರು,

ಬಾಲ್ಯ ವಿವಾಹಕ್ಕೆ ಒಳಗಾದ ಸುಧಾರವರು ತಮ್ಮ ಜೀವನದಲ್ಲಿ ಆದಂತಹ ಘಟನೆಗಳನ್ನು ವೇದಿಕೆಯಲ್ಲಿ ಹಂಚಿಕೊಂಡರು 5 ವರ್ಷದಲ್ಲಿ ಬಾಲ್ಯವಿವಾಹ ಆಗಿದ್ದು 16 ವರ್ಷಕ್ಕೆ ಮಕ್ಕಳು ಆಗಿದ್ದಾರೆ. ಆಡುವ ಕೂಸಿಗೆ ಕಾಡುವ ಕೂಸು ಎನ್ನುವ ಹಾಗೆ ನನ್ನ ಪರಿಸ್ಥಿತಿ ಆಯ್ತು ಋತುಮತಿಯಾದ ವರ್ಷದಲ್ಲೇ ನನ್ನ ಗಂಡನ ಮನೆಗೆ ಕಳಿಸಿಕೊಟ್ಟರು ಆ ಸಮಯದಲ್ಲಿ ನನ್ನ ವೈಯಕ್ತಿಕ ಆರೋಗ್ಯದ ಬಗ್ಗೆ ನನಗೆ ಅರಿವಿರಲಿಲ್ಲ ಶಿಕ್ಷಣದಿಂದ ವಂಚಿತಳಾದೆ. ಆಗ ರೀಚ್ ಸಂಸ್ಥೆಯ ಸಹಾಯದಿಂದ ಹತ್ತನೇ ತರಗತಿ ಉತ್ತೀರ್ಣಳಾದೆ ಪ್ರಸ್ತುತ ರೀಚ್ ಸಂಸ್ಥೆಯಲ್ಲಿ ಸ್ವಯಂ ಸೇವಕರಾಗಿ ಮಕ್ಕಳ ಹಕ್ಕುಗಳ ಬಗ್ಗೆ ಕೈ ಜೋಡಿಸಿದ್ದೇನೆ ನನಗಾದ ಪರಿಸ್ಥಿತಿ ಬೇರೆಯಾರಿಗೂ ಬರಬಾರದು ಎನ್ನುವ ದೃಷ್ಟಿಕೋನದಲ್ಲಿ ಈ ಮಹತ್ತರ ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನದಲ್ಲಿ ಭಾಗಿ ಆಗಿದ್ದೇನೆ ಎಂದು ಹೇಳಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಪಿ.ಚಂದ್ರಿಕಾ (ಪ್ರಾಚಾರ್ಯರು,ಎಸ್.ಸಿ.ನಂದಿಮಠ ಕಾನೂನು ಕಾಲೇಜ್, ವಿದ್ಯಾಗಿರಿ) ಹಾಗೂ ಈ ಕಾರ್ಯಕ್ರಮದಲ್ಲಿ ಕಾಲೇಜಿನ ಭೊದಕ ವೃಂದ ಮತ್ತು ಕಾನೂನು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಿರೂಪಣೆಯನ್ನು ಸಿದ್ದು ಮಾದರ, ಪ್ರಾರ್ಥನೆಯನ್ನು ಮಾಡಿದರು.



ಭಾರತದ ಸಂವಿಧಾನ ದಿನಾಚರಣೆ ಅಂಗವಾಗಿ ನವನಗರದ ಸೆಕ್ಟರ್ ನಂ.45ರಲ್ಲಿ ಇರುವ ಬುದ್ಧ ಉದ್ಯಾನವನದಲ್ಲಿ ಸಂವಿಧಾನ ಪ್ರಸ್ತಾವಣೆಯನ್ನು ಜಿಲ್ಲಾ ಛಲವಾದಿ ಮಹಾಸಭಾ ವತಿಯಿಂದ ಬೋಧಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಛಲವಾದಿ ಮಹಾಸಭಾ ಅಧ್ಯಕ್ಷ ವಿವೇಕಾನಂದ ಗರಸಂಗಿ, ಉಪಾಧ್ಯಕ್ಷರಾದ ಸುಭಾಸ ಬದಾಮಿ, ಸುನೀಲ ನಾರಾಯಣಿ, ಸಿದ್ದರಾಜ ಸೊನ್ನದ, ಡಿ.ಎಸ್.ಜೈಭೀಮ, ದಯಾನಂದ, ಶನಶಪ್ಪ ಬಂಡಿ, ನಾಸೀರ ಶೇಖ, ಕನಿಷ್ಕ ನೀಲನಾಯಕ, ಅಕ್ಷಯ ಹಾಗೂ ಇತರರು ಹಾಜರಿದ್ದರು.

# ಶ್ರೀ ಸಾಮಾನ್ಯರ ಕೆಲಸ ಮಾಡಿಕೊಡುವ ಮೂಲಕ ಜನಸ್ನೇಹಿ ಆಡಳಿತಕ್ಕೆ ಒತ್ತು ನೀಡಬೇಕು



ಸರ್ಕಾರಿ ನೌಕರರು ಗ್ರಾಮೀಣ ಪ್ರದೇಶದ ಜನರನ್ನು ಸತಾಯಿಸಿ ಕಛೇರಿಗೆ ಅಲೆದಾಡಿಸದೆ ನಿಗದಿತ ಅವಧಿಯೊಳಗೆ ಶ್ರೀ ಸಾಮಾನ್ಯರ ಕೆಲಸ ಮಾಡಿಕೊಡುವ ಮೂಲಕ ಜನಸ್ನೇಹಿ ಆಡಳಿತಕ್ಕೆ ಒತ್ತು ನೀಡಬೇಕು ಎಂದು ಮಂಡ್ಯ ಜಿಲ್ಲೆಯ ಲೋಕಾಯುಕ್ತ ಡಿವೈಎಸ್ ಪಿ ಸುನೀಲ್ ಕುಮಾರ್ ಕಿವಿಮಾತು ಹೇಳಿದರು

ಅವರು ಕೃಷ್ಣರಾಜಪೇಟೆ ಪಟ್ಟಣದ ತಾಲೂಕು ಆಡಳಿತ ಕಾರ್ಯಸೌಧದ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಜನಸಾಮಾನ್ಯರ ಕುಂದುಕೊರತೆಗಳನ್ನು ಆಲಿಸಿ ಮಾತನಾಡಿದರು.

ಲಂಚದ ಹಣಕ್ಕಾಗಿ ಒತ್ತಾಯಿಸಿ ಶ್ರೀ ಸಾಮಾನ್ಯರ ಕಾನೂನು ಬದ್ಧವಾದ ಕೆಲಸ ಕಾರ್ಯಗಳನ್ನು ಮಾಡಿಕೊಡದೆ ಸತಾಯಿಸಿ ಕಛೇರಿಗೆ ಅಲೆದಾಡಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದರೆ ಅಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ನಿರ್ಧಾಕ್ಷಿಣ್ಯ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ಸುನಿಲ್ ಕುಮಾರ್ ಸಕಾಲದ ಕಾಲ ಮಿತಿಯೊಳಗೆ ಜನರ ಕಾನೂನು ಬದ್ಧವಾದ ಸರ್ಕಾರಿ ಕೆಲಸಗಳನ್ನು ಮಾಡಿಕೊಡಬೇಕು. ನಮಗೆ

ಸರ್ಕಾರಿ ಕೆಲಸ ದೊರೆತಿರುವುದು ಪೂರ್ವಜನ್ಮದ ಪುಣ್ಯವಾಗಿದೆ. ನಾವು ಸರ್ಕಾರದಿಂದ ಜನರ ತೆರಿಗೆಯ ಹಣವನ್ನು ಸಂಬಳದ ರೂಪದಲ್ಲಿ ಪಡೆದು ಕೊಳ್ಳುತ್ತಿರುವುದರಿಂದ, ನಾವು ಪಡೆಯುವ ಸಂಬಳಕ್ಕೆ ಮೋಸಮಾಡದೇ ನಮ್ಮ ಆತ್ಮ ಸಾಕ್ಷಿಯು ಒಪ್ಪುವಂತೆ ಕೆಲಸ ಮಾಡಿ ಬಡ ಜನರ ಸೇವೆಯಲ್ಲಿ ಭಗವಂತನನ್ನು ಕಾಣುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಲೋಕಾಯುಕ್ತ ಉಪಾಧೀಕ್ಷಕರಾದ ಸುನಿಲ್ ಕುಮಾರ್ ಅವರಿಗೆ ದೂರುಗಳ ಮಹಾಪೂರವೇ ಹರಿದು ಬಂದಿತ್ತು. ಕರವೇ ಜಿಲ್ಲಾಧ್ಯಕ್ಷ ಹೊನ್ನೇನಹಳ್ಳಿ ವೇಣು ಹಾಗೂ ಸಾಮಾಜಿಕ ಕಾರ್ಯಕರ್ತ ಜಯಣ್ಣ ದೂರು ನೀಡಿ ಕಳೆದ 25–30 ವರ್ಷಗಳಿಂದ ಕೆ.ಆರ್.ಪೇಟೆ ಪಟ್ಟಣದ ಪುರಸಭೆ ಹಾಗೂ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ನೂರಾರು ಅಂಗಡಿ ಮಳಿಗೆಗಳನ್ನು ಬಹಿರಂಗವಾಗಿ ಹರಾಜು ಮಾಡದೇ ಕಡಿಮೆ ಬಾಡಿಗೆಗೆ ನೀಡಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ವಂಚನೆ ಆಗುತ್ತಿರುವುದನ್ನು ತಪ್ಪಿಸಿ ಬಹಿರಂಗ ಹರಾಜು ಮಾಡಲು ಮನವಿ ಮಾಡಿದ ಹಿನ್ನೆಲೆಯಲ್ಲಿ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಚೀಫ್ ಆಫೀಸರ್ ನಟ–ರಾಜ್ ಹಾಗೂ ತಾ.ಪಂ ಇಓ ಶ್ರೀನಿವಾಸ್ ಅವರಿಗೆ ನಿರ್ದೇಶನ ನೀಡಿದ ಲೋಕಾಯುಕ್ತ ಉಪಾಧೀಕ್ಷಕರು ಸರ್ಕಾರಿ ಆಸ್ತಿಪಾಸ್ತಿಗಳ ಅಕ್ರಮ ಒತ್ತುವರಿ ಹಾಗೂ ಪರಭಾರೆಯನ್ನು ತಪ್ಪಿಸಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ನಿವೇಶನ ಹಾಗೂ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆದು ಕೊಳ್ಳಬೇಕು. ಪಟ್ಟಣದ ಎಪಿಎಂಸಿ ಆವರಣದಲ್ಲಿ ಕಾಂಪೌಂಡ್ ಜಾಗ ದಲ್ಲಿರುವ 23ಗುಂಟೆ ಭೂಮಿಯನ್ನು ಅಕ್ರಮವಾಗಿ ಕಾಂಪೌಂಡ್ ಒಡೆದು ಒತ್ತುವರಿ ಮಾಡಿಕೊಳ್ಳಲು ಸಂಚು ರೂಪಿಸಿರುವ ಸುಖಧರೆ ಲಕ್ಷ್ಮೀನಾರಾಯಣ ಹಾಗೂ ಹೊಸಹೊಳಲು ಪೊಲೀಸ್ ಕ್ವಾಟ್ರಸ್ ಪಕ್ಕದಲ್ಲಿ ದಲಿತರಿಗೆ ಸೇರಿದ ಲಕ್ಷಾಂತರ ರೂಪಾಯಿ ಬೆಲೆಬಾಳುವ ನಿವೇಶನವನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ಸುಕನ್ಯಾ ರಾಮಚಂದ್ರ ಅವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸುವಂತೆ ಮುಖ್ಯಾಧಿ ಕಾರಿ ನಟರಾಜ್ ಅವರಿಗೆ ಸೂಚನೆ ನೀಡಿದರು.

ಕಳೆದ ಆರು ತಿಂಗಳುಗಳಿಂದ ಸರ್ಕಾರಿ ಕಛೇರಿಗೆ ಅರ್ಜಿ ಸಲ್ಲಿಸಿ ಅಲೆದಾಡುತ್ತಿರುವ ಜನರ ಸಮಸ್ಯೆಗಳಿಗೆ ಅಧಿಕಾರಿಗಳು ಕೂಡಲೇ ಸ್ಪಂದಿಸಿ ಕೆಲಸ ಮಾಡಬೇಕು. ಗುತ್ತಿಗೆದಾರ ಜಯಕೃಷ್ಣೆಗೌಡ ಅವರು ಅಕ್ರಮವಾಗಿ ಸ್ವಾಧೀನ ಪಡಿಸಿಕೊಂಡಿರುವ ಸರ್ಕಾರಿ ಕಟ್ಟೆಯನ್ನು ಸಾರ್ವಜನಿಕರ ಅನುಕೂಲಕ್ಕೆ ಬಿಡಿಸಿಕೊಡಲು ನೀರಾವರಿ ಇಲಾಖೆ, ತಾಲೂಕು ಪಂಚಾಯತಿ, ಕಂದಾಯ ಇಲಾಖೆ ಹಾಗೂ ಸರ್ವೇ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ಸರ್ಕಾರಿ ಕಟ್ಟೆಯನ್ನು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ವಶಕ್ಕೆ ಪಡೆದುಕೊಳ್ಳಬೇಕು ಎಂದು ಲೋಕಾಯುಕ್ತ ಅಧಿಕಾರಿ ನಿರ್ದೇಶನ ನೀಡಿದರು.

ತಹಶೀಲ್ದಾರ್ ಕರ್ನಲ್ ಅಶೋಕ್, ಲೋಕಾಯುಕ್ತ ಪೊಲೀಸ್ ಇನ್ಸ್ ಪೆಕ್ಟರ್ ಗಳಾದ ಜಯರತ್ನ, ಬ್ಯಾಟರಾಯಗೌಡ, ಮೋಹನರೆಡ್ಡಿ ಸಭೆಯ ನೇತೃತ್ವ ವಹಿಸಿದರೆ, ಎಪಿಎಂಸಿ ಕಾರ್ಯದರ್ಶಿ ಸತೀಶ್, ಆರ್ ಎಫ್ ಓ ಅನಿತಾ, ಗ್ರೇಡ್–2 ತಹಶೀಲ್ದಾರ್ ಲೋಕೇಶ್, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಪ್ರಭುಕುಮಾರ್, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ದಿವಾಕರ್, ಬಿಸಿಎಂ ಅಧಿಕಾರಿ ವೆಂಕಟೇಶ್, ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಗಳಾದ ನವೀನ್, ಸುಬ್ಬಯ್ಯ, ನೀರಾವರಿ ಇಲಾಖೆಯ ಎಇಇ ಗಳಾದ ಕೃಷ್ಣೆಗೌಡ, ವಿಶ್ವನಾಥ್, ದೇವೇಗೌಡ, ರಾಮಕೃಷ್ಣೆಗೌಡ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

**ವರದಿ.ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State